# ಧ್ಯೇಯ ಕಮಲ

ಮಾಸ ಪತ್ರಿಕೆ

ಉತ್ತಿಷ್ಠ ಭಾರತ

ಮಾರ್ಚ್ 2011

ಸಂಪುಟ - 4 ಸಂಚಿಕೆ - 6

ಪ್ರಕಾಶಕರು

ಎಸ್. ಸುರೇಶ್ ಕುಮಾರ್

ಸಂಪಾದಕರು

ಎಂ.ಬಿ. ಭಾನುಪ್ರಕಾಶ್

ಸಂಪಾದಕ ಮಂಡಳಿ

ಡಾ|| ಮಮ್ತಾಜ್ ಅಲಿಖಾನ್

ಗಣೇಶ ಯಾಜಿ

ಮುದ್ರಣ :

ರಾಷ್ಟ್ರೋತ್ಥಾನ ಮುದ್ರಣಾಲಯ,

ಕೇಶವ ಶಿಲ್ಪ, ಕೆಂಪೇಗೌಡ ನಗರ,

ಬೆಂಗಳೂರು - 560 019.

ವಾರ್ಷಿಕ ಚಂದಾ : 100 ರೂ.

ಬಿಡಿ ಪ್ರತಿ : 10 ರೂ.



ವಿವರಗಳಿಗೆ ಸಂಪರ್ಕಿಸಿ :

**ಧ್ಯೇಯಕಮಲ ಕನ್ನಡ ಮಾಸಪತ್ರಿಕೆ,**

ಬಿಜೆಪಿ ರಾಜ್ಯ ಕಾರ್ಯಾಲಯ,

ನಂ. 11, 12ನೇ ಮುಖ್ಯರಸ್ತೆ,

16ನೇ ಅಡ್ಡರಸ್ತೆ, ಮಲ್ಲೇಶ್ವರಂ ಪಶ್ಚಿಮ

ಬೆಂಗಳೂರು - 560 055.

ದೂ. : 080-22041976

ಫ್ಯಾಕ್ಸ್ : 080-23460398

Email: bjponline@gmail.com
ganeshyaji@yahoo.co.in


## ಸಂಪಾದಕೀಯ....

ಫೆಬ್ರವರಿ 20ರ ಬೂತ್ ಕಾರ್ಯಕರ್ತರ ಸಮಾವೇಶ ಎಲ್ಲರ ಮನಸ್ಸಿನಲ್ಲಿ ಉಳಿಯುವಂತಹ ಒಂದು ಕಾರ್ಯಕ್ರಮ. ಕಳೆದ ನಾಲ್ಕಾರು ವರ್ಷಗಳಿಂದ ಸಂಘಟನೆಗೆ ಆದ್ಯತೆ ನೀಡಿ ಮಾಡಿರುವ ಪ್ರಯತ್ನಗಳ ಒಟ್ಟು ಫಲ ಈ ಸಮಾವೇಶ. ಸದಸ್ಯತ್ವ ಅಭಿಯಾನ, ಲೆಕ್ಕವಿಲ್ಲದಷ್ಟು ಬೈಠಕ್‌ಗಳು, ಜಿಲ್ಲಾ, ವಿಭಾಗಗಳ ಟೀಂ ವರ್ಕ್, ಹೋರಾಟಗಳಿಗಾಗಿ ಸಾಮೂಹಿಕ ಪ್ರಯತ್ನಗಳು, ಕೇಂದ್ರದ ಕ್ರಿಯಾಶೀಲ ಕಾರ್ಯಾಲಯ, ಪ್ರಶಿಕ್ಷಣ ವರ್ಗಗಳು ಹೀಗೆ ಹತ್ತು ಹಲವು ಪ್ರಯತ್ನಗಳು. ಚುನಾವಣೆ ತಂತ್ರ – ಸಂಘಟನೆಯ ಮಂತ್ರ ಒಂದಕ್ಕೊಂದು ಪೂರಕವಾಗಿ ನಡೆದಾಗ ಮಾತ್ರ ಯಶಸ್ಸು ನಿರಂತರ ಎಂಬ ಸತ್ಯವನ್ನು ಕಾರ್ಯಕರ್ತರಲ್ಲಿ ನಂಬಿಕೆಯ ವಿಷಯವಾಗಿ ಮೂಡಿಸುವುದರಲ್ಲಿ ಮೇಲ್ಕಂಡ ಹಲವು ಕಾರ್ಯಚಟುವಟಿಕೆಗಳು ಸಹಕಾರಿಯಾಗಿದೆ.

ಬಿಜೆಪಿಯ ಪ್ರಗತಿಯ ಬಗ್ಗೆ ಅಪಪ್ರಚಾರ ಮಾಡುತ್ತಾ, ಅಸತ್ಯವನ್ನು ಸತ್ಯ ಎಂದು ಒಪ್ಪಿಸುವ ವಿರೋಧಿಗಳ ತಂತ್ರದಿಂದ ಮನಸ್ಸಿಗೆ ನೋವಾಗಿದ್ದ ಕಾರ್ಯಕರ್ತರಿಗೆ, ಹಿತೈಷಿ ಅಭಿಮಾನಿಗಳಿಗೆ ಭರವಸೆ ಮೂಡಿಸುವ ಸಮಾವೇಶ ಇದಾಗಿದೆ. ಆದರೆ ಈ ಸಮಾವೇಶದಿಂದ ಎಲ್ಲವೂ ಸಾಧಿಸಿದ ಹಾಗೆ ಆಯ್ತಾ ಎಂಬ ಪ್ರಶ್ನೆ ಇದ್ದೇ ಇದೆ. ಕಾರಣ ಈ ಸಮಾವೇಶ ಕೇವಲ ಒಂದು ದಿಕ್ಸೂಚಿ ಮಾತ್ರ. ನಾವು ತಲುಪಬೇಕಾದ ಗುರಿಯನ್ನು ಸಾಧಿಸಲು ಪ್ರತಿ ಕಾರ್ಯಕರ್ತನನ್ನು ಸಿದ್ದಗೊಳಿಸಬೇಕಾದ ರೀತಿಯನ್ನು ಮಾತ್ರ ಈ ಸಮಾವೇಶ ಸಾಧಿಸಿದೆ. ಸಾಕಷ್ಟು ಕಲುಷಿತ ರಾಜಕಾರಣದ ವಾತಾವರಣದ ಮಧ್ಯೆಯೂ ಕೂಡಾ, ಬಿಜೆಪಿಯ ಪ್ರತಿ ಕಾರ್ಯಕರ್ತ 10ರೂ. ಶುಲ್ಕ ನೀಡಬೇಕು, ನಿಗದಿತ ಸ್ಥಳದಲ್ಲಿ ಕೂರಬೇಕು. ಊಟದ ಸ್ಥಳಗಳಲ್ಲಿ ಸಾಲಾಗಿ ನಿಂತು ಊಟ ಮಾಡಬೇಕು. 4–5 ಗಂಟೆ ಕಾರ್ಯಕ್ರಮದಲ್ಲಿ ಪೂರ್ತಿ ಇರಬೇಕು, ಎಂದು ಸೂಚನೆ ನೀಡಿದರೆ, ಸೂಚನೆ ಉಲ್ಲಂಘಿಸಿದ ಕಾರ್ಯಕರ್ತರ ಸಂಖ್ಯೆ ಬಹಳ ಕಡಿಮೆ. ಅನುಶಾಸನ ಮೂಡಿಸುವ ಪ್ರಯತ್ನದಲ್ಲಿ ನಾವು ಒಳ್ಳೆಯ ಪ್ರಯತ್ನ ಮಾಡುತ್ತಿದ್ದೇವೆ.

ಉದ್ಘಾಟನೆ ಕಾರ್ಯಕರ್ತರಿಂದ, ಪುಷ್ಪ ವೃಷ್ಟಿ ನಾಯಕರಿಂದ ಕಾರ್ಯಕರ್ತರಿಗೆ, ಭಾವನೆಗಳನ್ನು ಮೂಡಿಸುವ ಪ್ರದರ್ಶಿನಿ, ಪ್ರತಿಯೊಂದು ಕೂಡಾ ಮುಂದಿನ ದಿನಗಳಲ್ಲಿ ಬಿಜೆಪಿಯ ಕಾರ್ಯದ ದಿಕ್ಕನ್ನು ನಿರ್ಧರಿಸುವ ಸಮಾವೇಶ ಇದು. ಕಳೆದ 4–6 ವರ್ಷಗಳ ಚಟುವಟಿಕೆಗಳ ಫಲವಾಗಿ ಸಂಘಟನೆಯೇ ಸರ್ವಸ್ವ ಎನ್ನುವ ಸಸಿಯೊಂದು ಮೊಳಕೆಯೊಡದಿದೆ. ಇದು ಕೇವಲ ಸಸಿಮಾತ್ರ. ಇದು ಬೆಳೆಯಬೇಕಾಗಿದೆ. ಬೆಳೆದು ದೊಡ್ಡ ಮರವಾಗಿ ಹೂವು ಫಲವನ್ನು ಕೊಡಬೇಕಾಗಿದೆ. ಸಾವಿರಾರು ಜನರಿಗೆ ನೆರಳನ್ನು ಕೊಡಬೇಕಾಗಿದೆ. ವೃತ್ತಿಗಿಂತ ತತ್ವ ದೊಡ್ಡದು ಎಂಬ ಸಂದೇಶವನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ, ಮನವರಿಕೆ ಮಾಡಿಕೊಡಬೇಕಾಗಿದೆ. ಈಗ ನಡೆದಿರುವ ಸಮಾವೇಶ ಕೂಡಾ ಪ್ರಚಾರದಿಂದ ಆದ ಸಮಾವೇಶವಲ್ಲ, ಬದಲಾಗಿ ಕಾರ್ಯಕರ್ತರ ಪರಿಶ್ರಮದಿಂದ ಆದ ಯಶಸ್ಸು ಎಂಬುದನ್ನು ಅರ್ಥೈಸಿಕೊಳ್ಳಬೇಕಾಗಿದೆ.

ವಿಭಿನ್ನವಾದ ರೀತಿಯ ಸಂಘಟನೆಯನ್ನು ಕಟ್ಟಿ ನಿಲ್ಲಿಸಬೇಕಾಗಿದೆ. ಹಾಗಾಗಿ ಪ್ರತಿ ಜಿಲ್ಲೆಗಾಗಿ ಯೋಜಿಸಿರುವ ಕಾರ್ಯಕ್ರಮಗಳ ಕುರಿತು ವಿಶೇಷ ಗಮನ ಅಗತ್ಯ. ಸಮಾವೇಶದ ಯಶಸ್ಸಿನ ಗುಂಗಿನಲ್ಲಿ ಮುಳುಗದೇ, ಸಂಘಟನೆ ಬೇರು ಮಟ್ಟದಲ್ಲಿ ಧೃಡವಾಗುವಂತೆ ಚಟುವಟಿಕೆಗಳು ಅಗತ್ಯ. ಅದಕ್ಕಾಗಿ ಶಕ್ತಿಕೇಂದ್ರ, ಬೂತ್‌ಗಳು, ಪ್ರವಾಸ, ಪ್ರಶಿಕ್ಷಣ, ಸಂಪರ್ಕ ಇತ್ಯಾದಿಗಳ ಕಡೆ ಹೆಚ್ಚಿನ ಗಮನ ಅಗತ್ಯ. "ಪ್ರಜಾತಂತ್ರದ" ಉಳಿವಿಗಾಗಿ ಜನ ಸಂಪರ್ಕ, ಜನ ಸಂವಾದ, ಜನ ಜಾಗರಣ, ಜನ ಸಂಸ್ಕಾರ, ತನ್ಮೂಲಕ ಜನಹಿತ ಪ್ರತಿ ಮತಗಟ್ಟೆಯಲ್ಲಿ ಸಾಧಿಸುವ ಸಂಕಲ್ಪ ಬೇಕಾಗಿದೆ. ಇಷ್ಟೆಲ್ಲಾ ಚಟುವಟಿಕೆಯ ಯಶಸ್ಸು ಸಿಕ್ಕದ್ದರೂ ಕೂಡಾ ಸುಭಾಷಿತದಲ್ಲಿ ಹೇಳುವಹಾಗೆ "ಅಕರ್ತವ್ಯಂ ನ ಕರ್ತವ್ಯಂ ಪ್ರಾಣೈ: ಕಂಠಗತೈರಪಿ, ಕರ್ತವ್ಯಮೇವ ಕರ್ತವ್ಯಂ ಪ್ರಾಣೈ: ಕಂಠಗತೈರಪಿ". ಕರ್ತವ್ಯವಲ್ಲದನ್ನು ಪ್ರಾಣ ಹೋದರೂ ಮಾಡಬಾರದು, ಕರ್ತವ್ಯವನ್ನು ಪ್ರಾಣವನ್ನು ಕೊಟ್ಟಾದರೂ ಮಾಡಬೇಕು ಎಂಬ ನಡವಳಿಕೆ ನಮ್ಮದಾದರೆ ಮಾತ್ರ ಇದೆಲ್ಲವನ್ನೂ ಸಾಧಿಸಲು ಸಾಧ್ಯ.

ಇಂತಿ ನಿಮ್ಮವ,

ಭಾನುಪ್ರಕಾಶ್

(ಎಂ.ಬಿ.ಭಾನುಪ್ರಕಾಶ್)

ಒಳಪುಟಗಳಲ್ಲಿ..........

ರಾಜ್ಯ ಬಿಜೆಪಿ ಸಮಾವೇಶ.............4

ಸಮಾವೇಶದ ದೃಶ್ಯಾವಳಿಗಳು.......9

ಬಜೆಟ್ ಮಂಡನೆ ದೃಶ್ಯಾವಳಿಗಳು.16

ಕೃಷಿ ಬಜೆಟ್.............................17

ರಾಜ್ಯ ಮುಂಗಡ ಪತ್ರ...............20

**Declaration in Form No. IV**

| | | |
|---|---|---|
| Name of the Magazine | : | Dhyeya Kamala |
| Periodicity | : | Monthly |
| Language | : | Kannada |
| Name of the Publisher, Printer & Owner | : | Sri S. Suresh Kumar<br>Sri Bhavoo Rao Deshpande - Smaraka Bhavana,<br>No. 1/1, 8th Main,<br>6th Cross, Malleshwaram,<br>Bangalore 560003. |
| Printing Press | : | Rastrothana Mudranalaya,<br>Keshavashilpa,<br>Kempegowdanagar,<br>Bangalore 560019. |
| Name of the Editor | : | Sri M.B. Bhanuprakash |

## ಸಂಘಟನೆಯ ವಿರಾಟ್‌ರೂಪ ದರ್ಶನ

# ರಾಜ್ಯ ಬಿಜೆಪಿ ಸಮಾವೇಶ

ಫೆಬ್ರವರಿ 20ರಂದು ಬೆಂಗಳೂರು ನಗರದ ಅರಮನೆ ಆವರಣದಲ್ಲಿ ನಡೆದ ಬೃಹತ್ ಬಿಜೆಪಿ ಸಮಾವೇಶ ಪಕ್ಷದ ಸಂಘಟನೆಯ ವಿರಾಟ್‌ಸ್ವರೂಪಕ್ಕೆ ಸಾಕ್ಷಿಯಾಗಿ ನಿಂತಿತು.

ನಗರದ ಸಮಾವೇಶಗಳ ಇತಿಹಾಸದಲ್ಲೇ ಅದ್ವಿತೀಯವೆನಿಸಿದ ಈ ಸಮಾವೇಶದಲ್ಲಿ ಮತಗಟ್ಟೆ ಪ್ರಮುಖರಿಂದ ಮೇಲ್ಪಟ್ಟ ಲಕ್ಷಾಂತರ ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು. ಜನತೆಗೆ ವಂದನೆ - ಕಾರ್ಯಕರ್ತರಿಗೆ ಅಭಿನಂದನೆ ಎಂಬ ವಿಶಿಷ್ಟ ಘೋಷಣೆಯೊಂದಿಗೆ ಆಯೋಜಿಸಲ್ಪಟ್ಟ ಈ ಸಮಾವೇಶವನ್ನು ಕಾರ್ಯಕರ್ತರೇ ದೀಪ ಬೆಳಗಿ ಉದ್ಘಾಟಿಸಿದ್ದು ಅಭೂತ ಪೂರ್ವವೆನಿಸಿತು.

### ಎನ್‌ಡಿಎ ಅಧಿಕಾರಕ್ಕೆ ಬರುವುದು ಶತಃ ಸಿದ್ಧ - ಶ್ರೀ ಗಡ್ಕರಿಜಿ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುವುದು ಶತಃ ಸಿದ್ಧ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ನಿತಿನ್ ಗಡ್ಕರಿ ಆಶಾವಾದ ವ್ಯಕ್ತಪಡಿಸಿದರು.

ರಾಜ್ಯ ಬಿಜೆಪಿ ಸರ್ಕಾರ ಒಂದು ಸಾವಿರ ದಿನ ಪೂರೈಸಲಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಜನತೆಗೆ ವಂದನೆ - ಕಾರ್ಯಕರ್ತರಿಗೆ ಅಭಿನಂದನೆ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿಗೆ ದೇಶಾದ್ಯಂತ ಉತ್ತಮ ಜನಬೆಂಬಲ ವ್ಯಕ್ತವಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಪಕ್ಷಕ್ಕೆ ಉತ್ತಮ ಭವಿಷ್ಯವಿದೆ ಎಂದು ಅವರು ಹೇಳಿದರು.

2014ರ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುವ ಮೂಲಕ ಬಿಜೆಪಿಯ ಪ್ರಧಾನಮಂತ್ರಿ ದಿಲ್ಲಿಯ ಕೋಟೆ ಮೇಲೆ ರಾಷ್ಟ್ರಧ್ವಜ ಹಾರಿಸುವುದು ಖಚಿತ ಎಂದು ಹೇಳಿದರು. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಬಂದಲ್ಲಿ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪುಹಣವನ್ನು ಭಾರತಕ್ಕೆ ವಾಪಸ್ ತಂದು, ಈ ಹಣದಲ್ಲಿ ಗಂಗಾ-ಕಾವೇರಿ ನದಿ ಜೋಡಣೆ ಮಾಡಲಾಗುವುದು. ಈ ಕಾರ್ಯದಿಂದ ದೇಶದಲ್ಲಿ ಜಲ ಮತ್ತು ಕೃಷಿ ಕ್ಷೇತ್ರ ಸಮೃದ್ಧಿಯಾಗುವುದರಿಂದ ಭಾರತದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಅವರು ನುಡಿದರು.

- ನೆರೆಯ ಚೀನಾ ನಮ್ಮ ಗಡಿ ಪ್ರದೇಶವನ್ನು ಅತಿಕ್ರಮಿಸಿಕೊಂಡರೂ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮೌನವಹಿಸಿದೆ.
- ಸಂಸತ್ ಭವನದ ಮೇಲೆ ದಾಳಿ ನಡೆಸಿದ ಅಫ್ಜಲ್ ಗುರುವಿಗೆ ಸುಪ್ರೀಂಕೋರ್ಟ್ ಮರಣ ದಂಡನೆ ವಿಧಿಸಿ ಆರು ವರ್ಷ ಕಳೆದರೂ ಯುಪಿಎ ಸರ್ಕಾರ ಶಿಕ್ಷೆ ಜಾರಿ ಮಾಡಿಲ್ಲ

**ಹತ್ತು ಲಕ್ಷ ರೈತರ ಆತ್ಮಹತ್ಯೆ:** ಯುಪಿಎ ಸರ್ಕಾರದ ತಪ್ಪು ಆರ್ಥಿಕ ನೀತಿಯಿಂದಾಗಿ ದೇಶದ ಅರ್ಥ ವ್ಯವಸ್ಥೆ ಹದಗೆಟ್ಟಿದೆ. ಇದರಿಂದಾಗಿ ಸುಮಾರು ಹತ್ತು ಲಕ್ಷ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ದೇಶದ ಶೇ.80ರಷ್ಟು ಜನರ ದಿನದ ತಲಾ ಆದಾಯ ಕೇವಲ 30 ರೂಪಾಯಿಗೆ ಬಂದು ನಿಂತಿದೆ. ಈ ಹಣದಲ್ಲಿ ವ್ಯಕ್ತಿಯೊಬ್ಬ ಜೀವನ ಸಾಗಿಸಲು ಸಾಧ್ಯವೇ

ಎಂದು ಪ್ರಧಾನಿ ಶ್ರೀ ಮನಮೋಹನ್ ಸಿಂಗ್ ಹಾಗೂ ಯುಪಿಎ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಅವರು ಹೇಳಿದರು.

ಸಮ್ಮಿಶ್ರ ಧರ್ಮವಲ್ಲ: ಕುರ್ಚಿ ಉಳಿಸಿಕೊಳ್ಳುವ ಸಲುವಾಗಿ ಪಾಲುದಾರ ಪಕ್ಷಕ್ಕೆ ಸರ್ಕಾರ ರಕ್ಷಣೆ ನೀಡುವುದು ಸಮ್ಮಿಶ್ರ ಧರ್ಮವಲ್ಲ.

2ಜಿ ಸ್ಪೆಕ್ಟ್ರಂ ನಂತಹ ಭಾರೀ ಹಗರಣದಲ್ಲಿ ಸಿಲುಕಿರುವ ಅಂಗಪಕ್ಷ ಡಿಎಂಕೆಯನ್ನು ಕೈಬಿಟ್ಟಲ್ಲಿ ಅಧಿಕಾರ ತ್ಯಜಿಸಬೇಕಾದೀತು ಎಂಬ ಕಾರಣಕ್ಕೆ ರಕ್ಷಣೆ ನೀಡಲಾಗುತ್ತಿದೆ ಎಂದು ದೂರಿದ ಅವರು, ಸಮ್ಮಿಶ್ರ ಸರ್ಕಾರ ಎಂದ ಮಾತ್ರಕ್ಕೆ ಭ್ರಷ್ಟಾಚಾರವನ್ನು ಪ್ರೋತ್ಸಾಹಿಸುವುದು ಸರಿಯಲ್ಲ.

ಜಾತಿ, ಮತ, ಪಂಥ ಭೇದದ ರಾಜಕಾರಣದಲ್ಲಿ ಬಿಜೆಪಿಗೆ ವಿಶ್ವಾಸವಿಲ್ಲ. ದೇಶದ ಶ್ರೇಷ್ಠ ವಿಜ್ಞಾನಿ ಅಬ್ದುಲ್ ಕಲಾಂರನ್ನು ರಾಷ್ಟ್ರಪತಿಯನ್ನಾಗಿಸಿದ ಹೆಮ್ಮೆ ನಮಗಿದೆ. ಬಿಜೆಪಿ ಮುಸ್ಲಿಮ್ ವಿರೋಧಿಯಲ್ಲ

ಮೀನ- ಮೇಷ: ಸ್ವಿಸ್ ಬ್ಯಾಂಕ್ ಕಪ್ಪು ಹಣ ಹೊಂದಿರುವವರ ಹೆಸರು ಬಹಿರಂಗಪಡಿಸಿದಲ್ಲಿ ಸಿಕ್ಕಿ ಬೀಳುವ ಭಯ ಇರುವುದರಿಂದಲೇ ಕೇಂದ್ರ ಸರ್ಕಾರ ಈ ವಿಚಾರದಲ್ಲಿ ಮೀನ ಮೇಷ ಎಣಿಸುತ್ತಿದೆ ಎಂದು ಅವರು ದೂಷಿಸಿದರು.

ಮುಂದಿನ ಚುನಾವಣೆಯಲ್ಲಿ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಕಳುಹಿಸಿಕೊಡಿ ಭವಿಷ್ಯದಲ್ಲಿ ಹಿಂದೂಸ್ಥಾನದ ಚಿತ್ರಣವನ್ನು ಬದಲಿಸುತ್ತೇವೆ ಎಂದು ಅವರು ಭರವಸೆ ನೀಡಿದರು. ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ, ಪಕ್ಷದ ರಾಜ್ಯ ಅಧ್ಯಕ್ಷ ಶ್ರೀ ಕೆ.ಎಸ್.ಈಶ್ವರಪ್ಪ, ಹಿರಿಯ ಮುಖಂಡ ಶ್ರೀ ಎಂ.ವೆಂಕಯ್ಯ ನಾಯ್ಡು, ರಾಜ್ಯ ಉಸ್ತುವಾರಿ ಶ್ರೀ ಧರ್ಮೇಂದ್ರ ಪ್ರಧಾನ್, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ಶ್ರೀ ಅನಂತಕುಮಾರ್, ರಾಜ್ಯ ಬಿಜೆಪಿ ಮಾಜಿ ಅಧ್ಯಕ್ಷ ಹಾಗೂ ಸಂಸದ ಶ್ರೀ ಡಿ.ವಿ.ಸದಾನಂದ ಗೌಡ, ಸಂಸದ ಹಾಗೂ ಹಿರಿಯ ನಾಯಕ ಶ್ರೀ ಡಿ.ಬಿ. ಚಂದ್ರೇಗೌಡ ಸೇರಿದಂತೆ ರಾಜ್ಯದ ಹಲವಾರು ಸಚಿವರು, ಶಾಸಕರು, ಸಂಸದರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಬರುವ ದಿನಗಳಲ್ಲಿ ರಾಜ್ಯದ ಚಿತ್ರಣ ಬದಲು - ಶ್ರೀ ಯಡಿಯೂರಪ್ಪ

ಮತದಾರರ ನಂಬಿಕೆ, ವಿಶ್ವಾಸಕ್ಕೆ ತಮ್ಮ ಸರ್ಕಾರ ದ್ರೋಹ ಬಗೆಯುವುದಿಲ್ಲ, ಆಡಳಿತದಲ್ಲಿ ಪಾರದರ್ಶಕತೆ ತರುವ ಮೂಲಕ ಮುಂದಿನ ಎರಡೂವರೆ ವರ್ಷಗಳಲ್ಲಿ ರಾಜ್ಯದ ಚಿತ್ರಣ ಬದಲು ಮಾಡುವುದಾಗಿ ಸಮಾವೇಶದಲ್ಲಿ ಮಾತನಾಡಿದ ಮುಖ್ಯಮಂತ್ರಿ ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹೇಳಿದರು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಎಷ್ಟೆಲ್ಲ ಕೋಟಿ ಹಣ ವ್ಯಯವಾದರೂ ರಾಜ್ಯದ ಸ್ಥಿತಿ ಮಾತ್ರ ಸುಧಾರಿಸಿಲ್ಲ. ಇದನ್ನು ನೆನಪಿಸಿಕೊಂಡರೆ ಕರುಳು ಕಿತ್ತು ಬರುತ್ತದೆ ಎಂದು ಅವರು ನುಡಿದರು.

ಶೇ.1 ಬಡ್ಡಿದರದಲ್ಲಿ ದೇಶದ ಯಾವ ರಾಜ್ಯದಲ್ಲಿ ಕೃಷಿಕನಿಗೆ ಸಾಲ ನೀಡಲಾಗುತ್ತಿದೆ. ಹೈನುಗಾರರಿಗೆ ಯಾವ ಮುಖ್ಯಮಂತ್ರಿ ಪ್ರೋತ್ಸಾಹಧನ ನೀಡಿದ್ದಾರೆ ಎಂದು ಪ್ರಶ್ನಿಸಿದ ಅವರು, ರಾಜ್ಯದಲ್ಲಿ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಆದರೆ, ಅದನ್ನು ಸದ್ಬಳಕೆ ಮಾಡುವ ಪ್ರಾಮಾಣಿಕ ಕೈಗಳ ಕೊರತೆ ಇದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೂ ಕಾಂಗ್ರೆಸ್ಸಿಗರು ಅಪಸ್ವರ ತೆಗೆದಿದ್ದರು ಆದರೆ, ಜಿಮ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ ಶೇ.50 ರಷ್ಟು ಪ್ರಗತಿ ಕಾರ್ಯ ಈಗಾಗಲೇ ನಡೆದಿದೆ ಎಂದು ಅವರು ಹೇಳಿದರು.

ಕೃಷಿ ಬಂಡವಾಳ ಹೂಡಿಕೆ ಸಮಾವೇಶ: ಮುಂಬರುವ ಜೂನ್‌ನಲ್ಲಿ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲಾಗುತ್ತಿದೆ. ಆ ಮೂಲಕ ಕೃಷಿ ಕ್ಷೇತ್ರಕ್ಕೆ ಸುಮಾರು 590 ಸಾವಿರ ಕೋಟಿ ರೂಪಾಯಿ ಬಂಡವಾಳ ಹರಿದುಬರುವ ನಿರೀಕ್ಷೆ ಇದೆ ಎಂದು ಅವರು ಸೂಚಿಸಿದರು.

ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ಆದರೆ, ಕೊಟ್ಟ ಹಣ ದುರುಪಯೋಗವಾಗುತ್ತಿದೆ. ಹೀಗಾಗಿ ಸರ್ಕಾರದ ಯೋಜನೆಗಳನ್ನು ಮಧ್ಯವರ್ತಿಗಳ ಉಪಟಳವಿಲ್ಲದೆ ಜನತೆಗೆ ತಲುಪಿಸುವ ಹೊಣೆಗಾರಿಕೆಯನ್ನು ಪಕ್ಷದ ಕಾರ್ಯಕರ್ತರು ವಹಿಸಿಕೊಳ್ಳಬೇಕಿದೆ ಎಂದು ಅವರು ಹೇಳಿದರು.

150 ಸ್ಥಾನಗಳಲ್ಲಿ ಗೆಲುವು: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ರಾಜ್ಯದ 28 ಕ್ಷೇತ್ರದಲ್ಲಿ 25ರಲ್ಲಿ ಹಾಗೂ 150 ಶಾಸಕರನ್ನು ಗೆಲ್ಲಿಸಿಕೊಳ್ಳುವ ಭರವಸೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಹಕಾರ ಸಂಘ, ಸ್ಥಳೀಯ ಸಂಸ್ಥೆಗಳಲ್ಲಿ ಎರಡೂವರೆ ವರ್ಷಗಳ ಹಿಂದೆ ಪಕ್ಷದ ಪ್ರತಿನಿಧಿಗಳಿರಲಿಲ್ಲ. ಅಭಿವೃದ್ಧಿಗೆ ಒತ್ತು ನೀಡಿದ ಕಾರಣ ಬಿಬಿಎಂಪಿ ಸಹ ಬಿಜೆಪಿ ವಶವಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕರ್ತರ ಜತೆಗೆ ಸೈಕಲ್ ತುಳಿದು, ರಾಜ್ಯದ ಉದ್ದಗಲಕ್ಕೂ ಓಡಾಡಿ- ಹೋರಾಟ ನಡೆಸಿ ಪಕ್ಷ ಕಟ್ಟಿದ್ದರೂ ಯಡಿಯೂರಪ್ಪನೆಪ ಮಾತ್ರ. ಕಾರ್ಯಕರ್ತರ ಪರಿಶ್ರಮದಿಂದ ಪಕ್ಷ ಇಂದು ಅಧಿಕಾರಕ್ಕೆ ಬಂದಿದೆ ಎಂದು ಅವರು ಸ್ಮರಿಸಿದರು.

ಸಮಾರಂಭದಲ್ಲಿ ಬಿಜಪಿ ರಾಷ್ಟ್ರೀಯ ಪ್ರ. ಕಾರ್ಯದರ್ಶಿ ಶ್ರೀ ಅನಂತಕುಮಾರ್, ರಾಜ್ಯ ಉಸ್ತುವಾರಿ ಶ್ರೀ ಧರ್ಮೇಂದ್ರ ಪ್ರಧಾನ್ ಹಾಗೂ ಸಂಸದ ಶ್ರೀ ಸದಾನಂದಗೌಡರು ಮಾತನಾಡಿದರು.

ರಾಜಕೀಯ ಪಕ್ಷದ ಕಾರ್ಯಕರ್ತನೆಂದರೆ ತಮ್ಮ ನಾಯಕನಿಗೆ ಜೈಕಾರ ಹಾಕುತ್ತಾ ಅವರ ಹಿಂದೆ ತಿರುಗುವುದು ವಾಡಿಕೆ. ಆದರೆ, ಬಿಜೆಪಿಯ ಸಮಾವೇಶದಲ್ಲಿ ರಾಜ್ಯದಲ್ಲಿ ಸರ್ಕಾರವನ್ನು ಅಸಿತಿತ್ವಕ್ಕೆ ತಂದ ಜನತೆಗೆ ವಂದನೆ ಹಾಗೂ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿಯೇ ಆಯೋಜಿಸಿದ್ದ ಸಮಾವೇಶಕ್ಕೆ ರಾಜ್ಯದ ಮೂಲೆ ಮೂಲೆಯಿಂದ ಆಗಮಿಸಿದ್ದ ಬೂತ್ ಮಟ್ಟದ ಲಕ್ಷಾಂತರ ಕಾರ್ಯಕರ್ತರಿಗೆ ಸ್ವತಃ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಶ್ರೀ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಪಕ್ಷದ ರಾಜ್ಯಾಧ್ಯಕ್ಷ ಶ್ರೀ ಕೆ.ಎಸ್.ಈಶ್ವರಪ್ಪ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಅನಂತಕುಮಾರ್ ಪುಷ್ಪ ವೃಷ್ಟಿಗರೆಯುವ ಮೂಲಕ ಅರ್ಥಪೂರ್ಣವಾಗಿ ಅಭಿನಂದನೆ ಸಲ್ಲಿಸಿದ್ದು, ಕಾರ್ಯಕರ್ತರಲ್ಲಿ ಧನ್ಯತೆಯ ಭಾವ ಮೂಡಿಸಿತ್ತು.

## ಸಮಾವೇಶದ ವಿಶೇಷಗಳು

- ಎರಡು ವಿಶೇಷ ಸಂದರ್ಭಗಳ ಸಂಭ್ರಮದ ಆಚರಣೆಗೆ ಮತಗಟ್ಟೆ ಪ್ರಮುಖರ ಈ ಸಮಾವೇಶವನ್ನು ಯೋಜಿಸಲಾಗಿತ್ತು.

1.ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ

ದಕ್ಷಿಣಭಾರತದ ಮೊಟ್ಟಮೊದಲ ಬಿಜೆಪಿ ರಾಜ್ಯ ಸರ್ಕಾರ 1000 ದಿನಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಸಂದರ್ಭ.

2. ಒಂದು ರಾಜಕೀಯ ಚಕ್ರ (2008ರ ವಿಧಾನಸಭೆ, 2009ರ ಲೋಕಸಭೆ, 2010ರ ಗ್ರಾಮಪಂಚಾಯತಿ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ– 2010, ಸಹಕಾರಿ ಕ್ಷೇತ್ರ, ವಿಧಾನಪರಿಷತ್ ಹಾಗೂ ಉಪಚುನಾವಣೆಗಳು)ವನ್ನು ಯಶಸ್ವಿಯಾಗಿ ಕ್ರಮಿಸಿದ್ದಕ್ಕೆ ಹಾಗೂ ಪದೇಪದೇ ಎದುರಾದ ರಾಜಕೀಯ ವಿಪ್ಲವಗಳನ್ನು ಎದುರಿಸಿಯೂ ಈ ಚುನಾವಣೆಗಳಲ್ಲಿ ಗೆಲುವನ್ನು ಸಾಧ್ಯವಾಗಿಸಿದ ಕಾರ್ಯಕರ್ತರನ್ನು ಅಭಿನಂದಿಸಲು.

- 30 ದಿನಗಳಿಗೂ ಕಡಿಮೆ ಅವಧಿಯಲ್ಲಿ ಈ ಸಮಾವೇಶವನ್ನು ಚರ್ಚಿಸಿ, ನಿರ್ಧರಿಸಿ, ಯೋಜಿಸಿ ಕಾರ್ಯರೂಪಕ್ಕೆ ತರಲಾಯಿತು. ಮೊಟ್ಟಮೊದಲ ಸಭೆ ಜನವರಿ 27ಕ್ಕೆ ನಡೆದರೆ ಫೆಬ್ರುವರಿ 20ರಂದು ಸಮಾವೇಶ ನಡೆಯಿತು.
- ಎರಡು ಪ್ರಮುಖ ಲಕ್ಷ್ಯಗಳೊಂದಿಗೆ ಈ ಸಮಾವೇಶವನ್ನು ಆಯೋಜಿಸಲಾಗಿತ್ತು.

1. ಎಲ್ಲಾ ಶಕ್ತಿ ಕೇಂದ್ರಗಳಲ್ಲಿ (1800) ಕಾರ್ಯಕರ್ತರ ತಂಡವೊಂದನ್ನು ರೂಪಿಸುವುದು. ಇದನ್ನು ಸಂಪೂರ್ಣವಾಗಿ ಸಾಧಿಸಲಾಯಿತು.
2. ರಾಜ್ಯದ ಒಟ್ಟು ಬೂತ್‌ಗಳಲ್ಲಿ (4300) 4–5 ಕಾರ್ಯಕರ್ತರ ತಂಡವೊಂದನ್ನು ರಚಿಸುವುದು. ಇದನ್ನು ಶೇ. 90 ಕ್ಕಿಂತ ಹೆಚ್ಚು ಬೂತ್‌ಗಳಲ್ಲಿ ಸಾಧಿಸಲಾಯಿತು.

- ಸಮಾವೇಶಕ್ಕೆ ಬೂತ್ ಪ್ರಮುಖರಲ್ಲದೆ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಸಹಕಾರಿ ಸಂಘಗಳ ನಿರ್ದೇಶಕರನ್ನೂ ಸಹ ಆಮಂತ್ರಿಸಲಾಗಿತ್ತು. ಸಮಾವೇಶಕ್ಕೆ ಆಮಂತ್ರಿಸಲ್ಪಟ್ಟವರ ಒಟ್ಟು ಸಂಖ್ಯೆ ಸುಮಾರು 2,30,000(224 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿಯೊಂದಕ್ಕೂ ಸುಮಾರು 1000 ಕಾರ್ಯಕರ್ತರಂತೆ)
- ಪ್ರತಿಯೊಂದು ವಿಭಾಗದಲ್ಲೂ ಶಕ್ತಿಕೇಂದ್ರ ಪ್ರಮುಖರ ಸಿದ್ಧತಾ ಸಭೆಗಳು ನಡೆದವು. ಈ ಸಭೆಗಳು ಸಮಾವೇಶದ ಒಟ್ಟಾರೆ ಯಶಸ್ಸಿಗೆ ನಾಂದಿ ಹಾಡಿದವು. ಈ ಸಿದ್ಧತಾ ಸಭೆಗಳು ಫೆಬ್ರುವರಿ 2 ಹಾಗೂ ಫೆಬ್ರುವರಿ 11ರ ನಡುವೆ ನಡೆದವು. ಎಲ್ಲಾ ಸಿದ್ಧತಾ ಸಭೆಗಳೂ ಯಶಸ್ವಿಯಾಗಿ ನಡೆದವು. ಒಟ್ಟಾರೆ ಸಿದ್ಧತಾ ಸಭೆಗಳಲ್ಲಿ 7000ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.
- ಸಮಾವೇಶಕ್ಕೆ ಆಮಂತ್ರಿಸಲ್ಪಟ್ಟ ಪ್ರತಿಯೊಬ್ಬ ಕಾರ್ಯಕರ್ತನಿಂದ 10ರೂ. ಗಳನ್ನು ಪ್ರವೇಶ ಶುಲ್ಕವನ್ನಾಗಿ ಪಡೆಯಲಾಯಿತು. ಅವರಿಗೆ ಅವರ ಬೂತ್‌ಸಂಖ್ಯೆ ಹೊಂದಿದ ಪ್ರವೇಶಪತ್ರ ನೀಡಲಾಯಿತು. ರಾಜ್ಯಾಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳಿಂದ ಹಿಡಿದು ಕಟ್ಟಕಡೆಯ ಗ್ರಾಮೀಣ ಕಾರ್ಯಕರ್ತರವರೆಗೆ ಎಲ್ಲರಿಂದಲೂ ಪ್ರವೇಶ ಶುಲ್ಕ ಪಡೆದು ಪ್ರವೇಶಪತ್ರ ನೀಡಲಾಯಿತು.
- ಇದೊಂದು ಸಾರ್ವಜನಿಕ ಸಭೆಯಾಗದೆ ಕೇವಲ ಆಯ್ಕೆ ಮಾಡಿದ ಕಾರ್ಯಕರ್ತರೇ ಸಮಾವೇಶಕ್ಕೆ ಬರುವಂತೆ ಗಮನಿಸಲಾಯಿತು.
- ಶಕ್ತಿಕೇಂದ್ರ ಮಟ್ಟದಲ್ಲಿ ಬೂತ್‌ಪ್ರಮುಖರ ಸಭೆ ನಡೆಸಲಾಯಿತಲ್ಲದೆ ನೂರಾರು ಶಕ್ತಿಕೇಂದ್ರಗಳಲ್ಲಿ "ಸಮರ್ಪಣಾ ದಿನ"ವನ್ನು ಆಚರಿಸಲಾಯಿತು.
- ಸಮಾವೇಶಕ್ಕೆ ಹಿಂದಿನ 15 ದಿನಗಳಲ್ಲಿ ರಾಜ್ಯಮಟ್ಟದಿಂದ ಹಿಡಿದು ಶಕ್ತಿಕೇಂದ್ರದವರೆಗಿನ ಎಲ್ಲಾ ಸಮಿತಿಗಳು ಬಿರುಸಿನ ಚಟುವಟಿಕೆಗಳಿಂದ ಕೂಡಿದ್ದವು.
- ರಾಜ್ಯ ಕಾರ್ಯಾಲಯದಲ್ಲಿ ನಿಯಂತ್ರಣ ಕೊಠಡಿಯೊಂದನ್ನು ಸ್ಥಾಪಿಸಲಾಗಿತ್ತು. ಕೇವಲ 6 ದಿನಗಳ ಅವಧಿಯಲ್ಲಿ ಮಹಿಳಾ ಮೋರ್ಚಾದ ಕಾರ್ಯಕರ್ತರು ಶಕ್ತಿಕೇಂದ್ರ ಮಟ್ಟದವರೆಗಿನ ಪ್ರತಿಯೊಬ್ಬ ಕಾರ್ಯಕರ್ತರನ್ನು ಮೂರು ಬಾರಿ ಸಂಪರ್ಕಿಸಿದರು. ಈ ಒಂದು ವಾರದ ಅವಧಿಯಲ್ಲಿ ಸುಮಾರು 70,000 ಕರೆಗಳನ್ನು ಮಾಡಲಾಗಿತ್ತು.
- ಇವೆಲ್ಲದರ ಫಲಿತಾಂಶ ಸಮಾವೇಶದ ದಿನ ಎಲ್ಲರ ಕಣ್ಣ ಮುಂದಿತ್ತು. ಆ ದಿನ 2650ಕ್ಕೂ ಹೆಚ್ಚು ಬಸ್‌ಗಳು ಹಾಗೂ 600ಕ್ಕೂ ಹೆಚ್ಚು ಇತರೆ ವಾಹನಗಳು ಬೆಂಗಳೂರು ತಲುಪಿದವು.
- ಪ್ರವೇಶ ಶುಲ್ಕ ನೀಡಿ ಪ್ರವೇಶಪತ್ರ ಪಡೆದ 1,67,000 ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಂಡರು. ಕರ್ನಾಟಕ ರಾಜ್ಯ ಬಿಜೆಪಿಯ ಇತಿಹಾಸದಲ್ಲಿ ಇದೊಂದು ಅತಿದೊಡ್ಡ ಸಮಾವೇಶವೆಂದು ಪರಿಗಣಿಸಲ್ಪಟ್ಟಿತು.

## ವ್ಯವಸ್ಥೆಯ ಪ್ರಬಂಧನೆ

- ಸಮಾವೇಶಕ್ಕೆ ಕೇವಲ 8 ದಿನಗಳ ಹಿಂದೆ ಫೆಬ್ರವರಿ 12, 2011 ರಂದು ಮೊಟ್ಟಮೊದಲ ಪ್ರಬಂಧಕರ ಸಭೆ ನಡೆಯಿತು.
- ಸಮಾವೇಶದ ನಿರ್ವಹಣೆಗೆ ರಚಿಸಲಾದ 43 ವಿಭಾಗಗಳನ್ನು 5 ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಗುಂಪಿಗೂ ಓರ್ವ ರಾಜ್ಯ ಪದಾದಿಕಾರಿಗಳು ಮುಖ್ಯಸ್ಥರಾಗಿದ್ದರು. ಈ 43 ವಿಭಾಗಗಳನ್ನು ವಿಂಗಡಿಸಿ 173 ಉಪವಿಭಾಗಗಳನ್ನು ರಚಿಸಲಾಯಿತು.
- ವ್ಯವಸ್ಥೆಯಲ್ಲಿ 2000ಕ್ಕೂ ಹೆಚ್ಚು ಪ್ರಬಂಧಕರು ಕಾರ್ಯನಿರ್ವಹಿಸಿದರು.
- ರಾಜ್ಯ ಯುವಮೋರ್ಚಾ 700ಕ್ಕೂ ಹೆಚ್ಚು ಪ್ರಮುಖ ಕಾರ್ಯಕರ್ತರನ್ನು ಕಾರ್ಯನಿರ್ವಹಣೆಗೆ ತೊಡಗಿಸಿತು. ಈ ತಂಡ ಸಮಾವೇಶದ ನಿರ್ವಹಣೆ ಅತ್ಯಂತ ಹೆಚ್ಚಿನ ಕ್ಷಮತೆಯೊಂದಿಗೆ ನಡೆಯುವಂತೆ ಗಮನಿಸಿತು.
- 800ಕ್ಕೂ ಹೆಚ್ಚು ಮಹಿಳಾ ಕಾರ್ಯಕರ್ತರು ನಿರ್ವಹಣೆಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರಿಂದ ಸಮಾವೇಶದ ಆವರಣದಲ್ಲಿ ಒಂದು ಕೌಟುಂಬಿಕ ವಾತಾವರಣ ಸೃಷ್ಟಿಯಾಯಿತು.
- ಪ್ರತಿ ಜಿಲ್ಲೆಯ ವ್ಯವಸ್ಥೆಯನ್ನು ಗಮನಿಸಲು ಪ್ರತಿ ಜಿಲ್ಲೆಯಿಂದ 6 ಹಿರಿಯ ಕಾರ್ಯಕರ್ತರಿಗೆ ಒಂದು ದಿನ ಮುಂಚಿತವಾಗಿ ಬರುವಂತೆ ಸೂಚಿಸಲಾಯಿತು. ಅವರ ಜಿಲ್ಲೆಗೆ ನಿಗದಿತ ಪ್ರವೇಶದ್ವಾರದ ನಿರ್ವಹಣೆ, ಸಾಹಿತ್ಯದ ವಿತರಣೆ ಮುಂತಾದವುಗಳನ್ನು ಗಮನಿಸುವ ಜವಾಬ್ದಾರಿಯನ್ನು ಅವರಿಗೆ ನೀಡಿದ್ದರಿಂದ ಸಮಾವೇಶದ ಒಟ್ಟಾರೆ ನಿರ್ವಹಣೆ ಹೆಚ್ಚು ಸುವ್ಯವಸ್ಥಿತವಾಗಿ ನಡೆಯಿತು.

## ವ್ಯವಸ್ಥೆಯ ವಿಶೇಷತೆಗಳು

- ಬೆಂಗಳೂರಿಗೆ 205 ಕಿ.ಮೀ. ದೂರದಲ್ಲಿರುವ ಚಿತ್ರದುರ್ಗವೂ ಸೇರಿದಂತೆ ತಿಪಟೂರು, ಗುಬ್ಬಿ, ಆದಿಚುಂಚನಗಿರಿ ಮಠ, ಯಡಿಯೂರು ಶ್ರೀಕ್ಷೇತ್ರ, ರಾಮನಗರ, ಶಿರಾ, ಶ್ರೀ ಸಿದ್ಧಗಂಗಾ ಮಠ, ದೇವನಹಳ್ಳಿ ಜೈನ ಮಂದಿರ, ನೆಲಮಂಗಲ, ಬೆಂಗಳೂರು ಮುಂತಾದ 11 ಸ್ಥಳಗಳಲ್ಲಿ ಶೌಚಾಲಯ, ಸ್ನಾನಗೃಹ ಹಾಗೂ ಬೆಳಗಿನ

ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. 90,000ಕ್ಕೂ ಹೆಚ್ಚು ಕಾರ್ಯಕರ್ತರು ಈ ಸೌಲಭ್ಯದ ಪ್ರಯೋಜನ ಪಡೆದರು. ಇದೊಂದು ಹೊಸ ಪ್ರಯೋಗವೆನಿಸಿ ಹಲವರಿಂದ ಪ್ರಶಂಸೆಗೆ ಪಾತ್ರವಾಯಿತು.

- ಸಮಾವೇಶದ ಆವರಣದಲ್ಲಿ ನಾಲ್ಕು ಕಡೆ ವಾಹನ ನಿಲುಗಡೆಯ ವ್ಯವಸ್ಥೆ ಮಾಡಿ ಪ್ರತಿಯೊಂದಕ್ಕೂ ಪ್ರತ್ಯೇಕ ನಿರ್ವಹಣಾ ತಂಡವನ್ನು ರಚಿಸಲಾಗಿತ್ತು.
- 85,000 ಕುರ್ಚಿಗಳನ್ನೊಳಗೊಂಡ 1100' X 500' ಅಳತೆಯ ಭಾರೀ ಗಾತ್ರದ ಸಭಾಂಗಣವನ್ನು ಸಮಾವೇಶಕ್ಕಾಗಿ ನಿರ್ಮಿಸಲಾಗಿತ್ತು.
- ಒಂದು ಮುಖ್ಯವೇದಿಕೆ ಹಾಗೂ ಇನ್ನೆರಡು ಉಪ ವೇದಿಕೆಗಳನ್ನು ರಚಿಸಲಾಗಿತ್ತು.
- ಪ್ರತಿ ಜಿಲ್ಲೆಗೂ ಪ್ರತ್ಯೇಕ ಒಳಾಂಗಣದ ವ್ಯವಸ್ಥೆ ಮಾಡಲಾಗಿತ್ತು ಹಾಗೂ ಪ್ರತಿ ಒಳಾಂಗಣದ ಪ್ರವೇಶ ದ್ವಾರವನ್ನು ಆಯಾ ಜಿಲ್ಲೆಯ ಸಾಂಸ್ಕೃತಿಕ, ಐತಿಹಾಸಿಕ ಹಿರಿಮೆಯನ್ನು ಸಾರುವ ರೀತಿಯಲ್ಲಿ ಶೃಂಗರಿಸಲಾಗಿತ್ತು.
- ಸಮಾವೇಶದ ಆವರಣ, ಪ್ರಾಂಗಣ ಹಾಗೂ ವೇದಿಕೆಗೆ ಕ್ರಮವಾಗಿ ಪಂ. ದೀನದಯಾಳ್ ಉಪಾಧ್ಯಾಯ, ಶ್ರೀ ಭಾವೂರಾವ್ ದೇಶಪಾಂಡೆ ಹಾಗೂ ಶ್ರೀ ಜಗನ್ನಾಥರಾವ್ ಜೋಶಿಯವರ ಹೆಸರನ್ನು ಇಡಲಾಗಿತ್ತು.
- ಸಮಾವೇಶದ ಕೇಂದ್ರ ಕಾರ್ಯಾಲಯಕ್ಕೆ ಶ್ರೀ ಜಿ.ಎಂ. ರಾಜಾಚಾರ್‌ರವರ ಹೆಸರಿಡಲಾಗಿತ್ತು.
- ಎರಡು ವಾರ್ತಾ ಕೇಂದ್ರಗಳು, ಸುಸಜ್ಜಿತ ಆರೋಗ್ಯ ಕೇಂದ್ರ, ಕಾಫಿಕೌಂಟರ್, ಸಾಕಷ್ಟು ಸಂಖ್ಯೆಯಲ್ಲಿ ಶೌಚಾಲಯಗಳು, ವಿಶೇಷ ಅತಿಥಿಗಳ ಒಳಾಂಗಣ, ಕಲಾವಿದರಿಗೆ ಪ್ರಸಾದನ ಕೊಠಡಿ ಇವೆಲ್ಲವೂ ಯೋಜನಾ ಬದ್ಧವಾಗಿ ನಿರ್ಮಿಸಲ್ಪಟ್ಟಿದ್ದವು.
- ಇಂಥ ದೊಡ್ಡ ಸಮಾವೇಶಗಳಲ್ಲಿ ಕುಡಿಯುವ ನೀರಿನದ್ದೇ ದೊಡ್ಡ ಸಮಸ್ಯೆ. ಆದರೆ ಇಲ್ಲಿ ಕುಡಿಯುವ ನಿರು ವಿಫುಲವಾಗಿ ಲಭ್ಯವಿತ್ತು. ಸುಮಾರು 100 ವಿತರಣಾ ಕೇಂದ್ರಗಳ ಮೂಲಕ 250 ಮಿ.ಲೀ.ನ 6,00,000 ನೀರಿನ ಪೊಟ್ಟಣಗಳನ್ನು ವಿತರಿಸಿ ಬಂದ ಕಾರ್ಯಕರ್ತರ ದಾಹ ನೀಗಿಸಲಾಯಿತು. ಪ್ರತಿನಿಧಿಗಳು ಕುಳಿತಲ್ಲಿಯೇ ನೀರನ್ನು ವಿತರಿಸಲಾಯಿತು.
- ಪ್ರಸಿದ್ಧ ಯಾತ್ರಾಸ್ಥಳಗಳು ಹಾಗೂ ಅಲ್ಲಿನ ದೇವತೆಗಳ ಹೆಸರಿನಲ್ಲಿ ನಾಲ್ಕು ಪ್ರಮುಖ ಅಡುಗೆ ಮನೆಗಳನ್ನು ಸ್ಥಾಪಿಸಲಾಯಿತು. (ಆದಿಚುಂಚನಗಿರಿ, ಸಿದ್ಧಗಂಗಾ, ಧರ್ಮಸ್ಥಳ ಹಾಗೂ ಮುಗಳಖೋಡ.) ಪ್ರತಿ ಅಡಿಗೆಮನೆಯಲ್ಲೂ ಎರಡು ಬಾರಿಗೆ 50,000 ಜನರಿಗೆ ಬೇಕಾಗುವಷ್ಟು ಆಹಾರವನ್ನು ಸಿದ್ಧಪಡಿಸಲಾಯಿತು. ಆಹಾರ ವಿತರಣೆಗೆಂದು 150 ವಿತರಣಾ ಕಿಂಡಿಗಳನ್ನು ನಿರ್ಮಿಸಲಾಗಿತ್ತು. ಬೆಳಿಗ್ಗೆ 7 ರಿಂದ ಸಂಜೆ 5.30ರವರೆಗೆ ನಿರಂತರವಾಗಿ ಆಹಾರ ವಿತರಣೆ ನಡೆಯಿತು. ಆಹಾರ ಹಾಗೂ ನೀರಿನ ಸರಬರಾಜಿನ ವಿಷಯದಲ್ಲಿ ಯಾವುದೇ ಸಣ್ಣ ಅಹಿತಕರ ಘಟನೆಯಾಗಲೀ, ಅಸಂತೋಷವಾಗಲೀ ಕಂಡುಬರಲಿಲ್ಲ.
- 15,000ಕ್ಕೂ ಹೆಚ್ಚು ಕಾರ್ಯಕರ್ತರು ಕುತೂಹಲಕ್ಕಾಗಿ ಸುವ್ಯವಸ್ಥಿತ ಆರೋಗ್ಯಕೇಂದ್ರಕ್ಕೆ ಭೇಟಿ ನೀಡಿದರು. ಅಲ್ಲಿರುವ ಸೌಲಭ್ಯಗಳನ್ನು ಕಂಡು ಮೂಕವಿಸ್ಮಿತರಾದರು.
- "ಕಾರ್ಯಕರ್ತರ ಕೈದೀವಿಗೆ" ಎಂಬ ಕಿರುಹೊತ್ತಿಗೆಯನ್ನು ಫೆಬ್ರುವರಿ 18ರಂದು ಮಾನ್ಯ ಮುಖ್ಯಮಂತ್ರಿಯವರು ಬಿಡುಗಡೆ ಮಾಡಿದರು. ಎಲ್ಲ ಪ್ರತಿನಿಧಿಗಳಿಗೂ ಈ ಕಿರುಹೊತ್ತಿಗೆಯ ಜೊತೆಗೆ 1,000 ದಿನಗಳಲ್ಲಿ ಬಿಜೆಪಿ ಸರ್ಕಾರದ ಸಾಧನೆಗಳನ್ನು ವಿವರಿಸುವ ಇನ್ನೊಂದು ಹೊತ್ತಿಗೆಯನ್ನು ನೀಡಲಾಯಿತು. ಜೊತೆಗೆ ವಂದೇಮಾತರಂ ಗೀತೆ, ನಾಡಗೀತೆ ಹಾಗೂ ರೈತಗೀತೆಗಳನ್ನೊಳಗೊಂಡ ಕೈಪಿಡಿಯನ್ನು ನೀಡಲಾಯಿತು.
- ಎಲ್ಲಾ ಮಹಿಳಾ ಕಾರ್ಯಕರ್ತೆಯರನ್ನು ಹೂ ಹಾಗೂ ಕುಂಕುಮಗಳಿಂದ ಸ್ವಾಗತಿಸಲಾಯಿತು. ಇದು ಇಡೀ ವಾತಾವರಣಕ್ಕೆ ಭಾವನಾತ್ಮಕ ಮೆರುಗು ನೀಡಿತು.
- ಸಭಾಂಗಣ, ವಿಶೇಷ ಪ್ರತಿನಿಧಿಗಳ ಒಳಾಂಗಣ ಹಾಗೂ ಮೆರವಣಿಗೆಯ ದಾರಿಯುದ್ದಕ್ಕೂ ರಂಗೋಲಿ ಹಾಕಿ ಸಿಂಗರಿಸಲಾಗಿತ್ತು.
- ಸಮಾವೇಶದ ಮುಖ್ಯ ದಾರಿಯನ್ನು "ಕೃಷ್ಣಾ ಕಾವೇರಿ" ಎಂದು ಹೆಸರಿಸಲಾಗಿತ್ತು. ಜೊತೆಗೆ ಆವರಣದೊಳಗೆ ಸಂಭಾಂಗಣಕ್ಕೆ ಸಾಗುವ ದಾರಿಗಳನ್ನು ವಿವಿಧ ನದಿಗಳ ಹೆಸರಿನಿಂದ ಕರೆಯಲಾಯಿತು.

## "ಕಮಲದ ಮನೆ"- ಪ್ರದರ್ಶಿನಿ

- ಸಮಾವೇಶದ ಸಂದರ್ಭದಲ್ಲಿ ಒಂದು ಪ್ರದರ್ಶಿನಿಯನ್ನು ಆಯೋಜಿಸಲಾಗಿತ್ತು.
- ಪಕ್ಷದ ಹಿರಿಯ ಕಾರ್ಯಕರ್ತರ ತಂಡವೊಂದನ್ನು ರಚಿಸಿ ಅವರಿಗೆ ಪ್ರದರ್ಶಿಸಲ್ಪಡುವ ಮಾಹಿತಿ ಸಂಗ್ರಹಣೆಯ ಜವಾಬ್ದಾರಿ ನೀಡಲಾಗಿತ್ತು.
- ಪ್ರದರ್ಶಿನಿಯ ಆವರಣವನ್ನು "ಕಮಲದ ಮನೆ" ಎಂದು ಹೆಸರಿಸಲಾಯಿತು. ಪ್ರದರ್ಶಿನಿ ಸುಮಾರು 60,000 ಚದರ ಅಡಿಗಳ ಸ್ಥಳವನ್ನು ಆವರಿಸಿತ್ತು.
- ಪ್ರದರ್ಶಿನಿಯಲ್ಲಿ "ವಿಚಾರ", "ವಿಕಾಸ", "ಅಂತ್ಯೋದಯ" ಎಂಬ ಮೂರು ವಿಭಾಗಗಳಿದ್ದವು.

1. ವಿಚಾರ: ಈ ವಿಭಾಗದಲ್ಲಿ ಪಕ್ಷದ ಇತಿಹಾಸ, ಬೆಳವಣಿಗೆ, ಹೋರಾಟಗಳು, ಕಾರ್ಯಕ್ರಮಗಳು, ಪ್ರಕಟಣೆಗಳು, ನಿಯತಕಾಲಿಕೆಗಳು, ವ್ಯಂಗ್ಯಚಿತ್ರಗಳು ಅಪರೂಪದ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಯಿತು. 2,000ಕ್ಕೂ ಹೆಚ್ಚಿನ ಭಿತ್ತಿ ಚಿತ್ರಗಳು ಇಲ್ಲಿ ಪ್ರದರ್ಶಿಸಲ್ಪಟ್ಟವು. ಶ್ರೀ ರಾಮಧ್ಯಾನಿ, ಚಿತ್ರದುರ್ಗದ ಬಿಜೆಪಿ ಸಂಸದ ಶ್ರೀ ಜನಾರ್ಧನಸ್ವಾಮಿ ಹಾಗೂ ಇತರ

   ಕಲಾವಿದರು ರಚಿಸಿದ 100ಕ್ಕೂ ಹೆಚ್ಚು ರಾಜಕೀಯ ವ್ಯಂಗ್ಯ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಕನ್ನಡ ಕವಿಗಳ ಹಾಗೂ ಕರ್ನಾಟಕದ ಪ್ರಸಿದ್ಧ ಸಾಮ್ರಾಜ್ಯಗಳ ಮಾಹಿತಿಯನ್ನೂ ಸಹ ಪ್ರದರ್ಶಿಸಲಾಯಿತು.
2. ವಿಕಾಸ: ಈ ವಿಭಾಗದಲ್ಲಿ 22 ಮಳಿಗೆಗಳಲ್ಲಿ ರಾಜ್ಯ ಸರ್ಕಾರದ ಸಾಧನೆಗಳನ್ನು ವಿವರಿಸುವ ಪ್ರದರ್ಶಿನಿಯನ್ನು ಜೋಡಿಸಲಾಯಿತು. ಪ್ರತೀ ಮಳಿಗೆಗೂ ವಿವರಣೆಗಳಿದ್ದು ದೊಡ್ಡ ಪ್ರಮಾಣದಲ್ಲಿ ವೀಕ್ಷಕರನ್ನು ಸೆಳೆಯಿತು.
3. ಅಂತ್ಯೋದಯ: ಈ ವಿಭಾಗದಲ್ಲಿ "ಅಂತ್ಯೋದಯ" ವಿಚಾರಕ್ಕೆ ಸಂಬಂಧಿಸಿದಂತೆ ಹಾಗೂ ನಮ್ಮ ರಾಜ್ಯದ ಹಲವು ಹಿರಿಯ ಕಾರ್ಯಕರ್ತರು ನಡೆಸಿರುವ ಸಾಮಾಜಿಕ ಕಾರ್ಯಗಳ ಪ್ರದರ್ಶಿನಿಯನ್ನು ಏರ್ಪಾಡು ಮಾಡಲಾಗಿತ್ತು.

- ಪ್ರದರ್ಶಿನಿಯ ಉದ್ಘಾಟನೆಯೇ ರೋಚಕವಾಗಿತ್ತು. ಬಿಜೆಪಿ ರಾಷ್ಟ್ರೀಯ

ಪ್ರಧಾನ ಕಾರ್ಯದರ್ಶಿ ಶ್ರೀ ಅನಂತ್‌ಕುಮಾರ್‌ರವರು ಸಾಂಪ್ರದಾಯಿಕ ದೀಪ ಬೆಳಗಿದರೆ, ಚಿತ್ರದುರ್ಗದ ಬಿಜೆಪಿ ಸಂಸದರಾದ ಶ್ರೀ ಜನಾರ್ಧನಸ್ವಾಮಿಯವರು ಕೃಷಿ ಆಯ–ವ್ಯಯದ ಕುರಿತು ಒಂದು ಚಿತ್ರ ಬರೆದರು. ರಾಜ್ಯಾಧ್ಯಕ್ಷರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಭಾರತೀಯ ಜನ ಸಂಘದಿಂದ ಹಿಡಿದು ಈವರೆಗಿನ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಪಟ್ಟಿಹೊಂದಿರುವ ಪ್ರದರ್ಶಿಕೆಯನ್ನು ಅನಾವರಣಗೊಳಿಸಿದರು.

- ಒಟ್ಟಾರೆ 60,000ಕ್ಕೂ ಹೆಚ್ಚು ಕಾರ್ಯಕರ್ತರು "ಕಮಲದ ಮನೆ"ಗೆ ಭೇಟಿ ನೀಡಿದರು. ವಾತಾವರಣ ಹೃದಯಸ್ಪರ್ಶಿಯಾಗಿತ್ತು.
- ಐಟಿ ಪ್ರಕೋಷ್ಠ, ಮಹಿಳಾ ಮೋರ್ಚಾ ಹಾಗೂ ಯುವ ಮೋರ್ಚಾ ಕಾರ್ಯಕರ್ತರು "ಕಮಲದ ಮನೆ"ಯಲ್ಲಿ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಿದರು.
- 200 ಆಸನಗಳನ್ನು ಹೊಂದಿದ ಎರಡು ಪ್ರತ್ಯೇಕ ಪ್ರದರ್ಶನಾ ಮಂದಿರಗಳನ್ನು ನಿರ್ಮಿಸಿ, ಅದರಲ್ಲಿ ಅಟಲ್‌ಜಿಯವರ ಭಾಷಣ, ಪಕ್ಷದ ವಿವಿಧ ಕಾರ್ಯಕ್ರಮಗಳು, ಕಾಶ್ಮೀರದ ಸಮಸ್ಯೆ, ಅಯೋಧ್ಯೆ, ನಕ್ಸಲಿಸಂ ಕುರಿತಾತದ ಚಿತ್ರಗಳನ್ನು ಪ್ರದರ್ಶಿಸಲಾಯಿತು.
- ರಾಷ್ಟ್ರೀಯ ಅಧ್ಯಕ್ಷರಾದ ಮಾನ್ಯ ಶ್ರೀ ನಿತಿನ್ ಗಡ್ಕರಿ, ರಾಜ್ಯದ ಉಸ್ತುವಾರಿಗಳಾದ ಶ್ರೀ ಧರ್ಮೇಂದ್ರ ಪ್ರಧಾನ್, ಶ್ರೀ ವಿ. ಸತೀಶ್‌ಜಿ ಹಾಗೂ ರಾಜ್ಯದ ಎಲ್ಲಾ ಸಚಿವರು ಈ ಪ್ರದರ್ಶಿನಿಯನ್ನು ವೀಕ್ಷಿಸಿದರು. ಪ್ರದರ್ಶಿನಿಯು ಎಲ್ಲಾ ಕಾರ್ಯಕರ್ತರ ಮನಗೆದ್ದಿತು. ಮಾಧ್ಯಮದ ಗಮನಸೆಳೆಯಿತು ಹಾಗೂ ಪ್ರತಿಯೊಬ್ಬರನ್ನು ಬಿಜೆಪಿಯ ಇತಿಹಾಸದ ಪುಟಗಳನ್ನು ಮೆಲುಕುಹಾಕುವಂತೆ ಮಾಡಿತು.

## ಮೆರವಣಿಗೆ

- ಸಮಾವೇಶದ ಮೆರವಣಿಗೆ ಒಂದು ವಿಶಿಷ್ಟ ಪ್ರಯೋಗವಾಗಿತ್ತು. ಸಮಾವೇಶದ ಆವರಣದ ಒಳಗೆ ಮೆರವಣಿಗೆಯನ್ನು ಆಯೋಜಿಸಲಾಗಿತ್ತು.
- ಮೂರು ಸಾಲಂಕೃತ ವಾಹನಗಳನ್ನು ನಿರ್ಮಿಸಿ, ಒಂದರಲ್ಲಿ ಬೃಹತ್ ಕಮಲ, ಎರಡನೆಯದರಲ್ಲಿ ನಮ್ಮ ಪಕ್ಷದ ಧ್ವಜ ಹಾಗೂ ಮೂರನೆಯದರಲ್ಲಿ ನಮ್ಮ ನಾಯಕರು ಸಾಗುವಂತೆ ವ್ಯವಸ್ಥೆ ಮಾಡಲಾಗಿತ್ತು.
- ಮೆರವಣಿಗೆಯಲ್ಲಿ ಜಾನಪದ ಕಲಾವಿದರು ಹಾಗೂ ಯುವ ಕಾರ್ಯಕರ್ತರ ಬೈಕ್ ಸವಾರಿಯೂ ಸೇರಿತ್ತು.
- ಪ್ರವೇಶ ಧ್ವಾರದಲ್ಲಿ ರಥದಲ್ಲಿ ಬಂದ ನಾಯಕರನ್ನು ಘೋಷಣೆಗಳೊಂದಿಗೆ ಬರಮಾಡಿಕೊಳ್ಳಲಾಯಿತು. ಕೃಷ್ಣ–ಕಾವೇರಿ ರಸ್ತೆಯ ಎರಡೂ ಕಡೆಗಳಲ್ಲಿ ರಥದಲ್ಲಿದ್ದ ನಾಯಕರು ರಸ್ತೆಯ ಎರಡೂ ಬದಿಯಲ್ಲಿ ನಿಂತಿದ್ದ ಕಾರ್ಯಕರ್ತರ ಮೇಲೆ ಪುಷ್ಪವೃಷ್ಟಿ ಮಾಡಿದರು.
- ಮೆರವಣಿಗೆಯು ಶ್ರೀ ಭಾವೂರಾವ್ ದೇಶಪಾಂಡೆ ಸಭಾಭವನವನ್ನು ಪ್ರವೇಶಿಸುತ್ತಿದ್ದಂತೆ ಕಹಳೆಗಳು ಮೊಳಗಿದವು ಹಾಗೂ ಮಹಿಳಾ ಕಾರ್ಯಕರ್ತರಿಂದ ಪೂರ್ಣಕುಂಭ ಸ್ವಾಗತವನ್ನು ನೀಡಲಾಯಿತು. ಸಭಿಕರ ನಡುವೆ ಮೆರವಣಿಗೆ ಸಾಗುತ್ತಿದ್ದಂತೆ ನಾಯಕರು ಹಾಗೂ ಸಭಿಕರು ಭಾವುಕರಾದರು. ಇದೊಂದು ಅವಿಸ್ಮರಣೀಯ ದೃಶ್ಯವಾಗಿತ್ತು.

## ಕಾರ್ಯಕ್ರಮದ ವಿವರಗಳು

- ಸಭೆಯ ವೀಕ್ಷಣೆಯ ಅನುಕೂಲಕ್ಕಾಗಿ 6 ಬೃಹತ್ ಎಲ್‌ಇಡಿ ಪರದೆಗಳು, 30 ಚಿಕ್ಕ ಪರದೆಗಳು ಹಾಗೂ 100ಕ್ಕೂ ಹೆಚ್ಚು ಸಿಸಿ ಟಿವಿಗಳನ್ನು ಜೋಡಿಸಲಾಗಿತ್ತು.
- ಮೂರು ವೇದಿಕೆಗಳಲ್ಲಿ ಜಿಲ್ಲಾಧ್ಯಕ್ಷರನ್ನೂ ಸೇರಿ 300 ಕ್ಕೂ ಹೆಚ್ಚು ಪ್ರಮುಖರು ಆಸೀನರಾಗಿದ್ದರು.
- ಮುಖ್ಯ ಕಾರ್ಯಕ್ರಮಕ್ಕೆ 2 ತಾಸು ಮುಂಚಿತವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಲ್ಪಟ್ಟಿದ್ದವು. ಕರ್ನಾಟಕ ಸಾಂಸ್ಕೃತಿಕ ಹಿರಿಮೆಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟವು.
- ಭಾಷಣಗಳ ಮಧ್ಯದಲ್ಲಿ ಶ್ರೀ ಕಿಕ್ಕೇರಿ ಕೃಷ್ಣಮೂರ್ತಿಯವರ ತಂಡದಿಂದ ವಂದೇ ಮಾತರಂ, ರೈತ ಗೀತೆ, ಏ ಮೇರೆ ವತನ್ ಕೇ ಲೋಗೋ ಹಾಗೂ ಇನ್ನಿತರ ಗೀತೆಗಳು ಹಾಡಲ್ಪಟ್ಟವು.
- ಒಟ್ಟಾರೆ 13 ಭಾಷಣಕಾರರು ಕಾರ್ಯಕ್ರಮದಲ್ಲಿ ಮಾತನಾಡಿದರು. ಇವರಲ್ಲಿ 10 ಭಾಷಣಕಾರರಿಗೆ ನಿರ್ದಿಷ್ಟ ವಿಷಯ ಕೊಟ್ಟು ಸಮಯವನ್ನು ನಿಗದಿ ಪಡಿಸಲಾಗಿತ್ತು. "ರಾಜಕೀಯದಲ್ಲಿ ಮಹಿಳೆಯ ಪಾತ್ರ", "ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಗುಣಮಟ್ಟದಲ್ಲಿ ಕರ್ನಾಟಕದ ಅಭಿವೃದ್ಧಿ", "ಕರ್ನಾಟಕ ಬಿಜೆಪಿಯ ಇತಿಹಾಸ", "ವಿಷಯಾಧಾರಿತ ಹೋರಾಟಗಳು", "ಗ್ರಾಮೀಣಾಭಿವೃದ್ಧಿಯಲ್ಲಿ ಜನಪ್ರತಿನಿಧಿಗಳ ಪಾತ್ರ" ಮುಂತಾದ ವಿಷಯಗಳು ಸೇರಿದ್ದವು. ಪ್ರತಿಯೊಬ್ಬ ಭಾಷಣಕಾರರೂ ತಮಗೆ ಕೊಟ್ಟ ವಿಷಯಕ್ಕೆ ಸೀಮಿತವಾಗಿ ಮಾತನಾಡಿದ್ದು ಮಾಧ್ಯಮ ಹಾಗೂ ಸಭಿಕರ ಗಮನ ಸೆಳೆಯಿತು.
- ಸಮಾವೇಶದ ಉದ್ಘಾಟನೆಯೇ ವಿಶಿಷ್ಟವಾಗಿತ್ತು. 36 ಜಿಲ್ಲೆಗಳಿಂದ ಆಯ್ದ ಮತಗಟ್ಟೆ ಸಂಚಾಲಕರನ್ನು ವೇದಿಕೆಗೆ ಕರೆತಂದು ಉಪಸ್ಥಿತರಿದ್ದ ನಾಯಕರ ಜೊತೆ ದೀಪ ಬೆಳಗಲು ಕೋರಲಾಯಿತು. 37 ದೀಪಗಳನ್ನು ಬೆಳಗಿದ್ದು ಎಲ್ಲರ ಗಮನ ಸೆಳೆಯಿತು.
- ವೇದಿಕೆಯು ಮತಗಟ್ಟೆ ಕಾರ್ಯದ 5 ಸೂತ್ರಗಳನ್ನು ಸೂಚಿಸಿತು. (1) ಜನ ಸಂಪರ್ಕ (2) ಜನ ಸಂವಾದ (3) ಜನ ಜಾಗರಣ (4) ಜನ ಸಂಸ್ಕಾರ (5) ಜನ ಹಿತ (ಕಲ್ಯಾಣ).
- ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಈ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ನಾಯಕರು ಅಭಿನಂದಿಸಿದರು. ಮಹಿಳಾ ಕಾರ್ಯಕರ್ತೆಯರು ಅವರಿಗೆ ಆರತಿ ಬೆಳಗಿದರು.
- ಭಾರೀ ಕರತಾಡನಗಳ ಮೂಲಕ ಪ್ರತಿನಿಧಿಗಳು ಎಲ್ಲರ ಭಾಷಣಗಳನ್ನು ಆಲಿಸಿದರು.
- ಈ ಸಮಾವೇಶದ ಯಶಸ್ಸಿಗೆ ದುಡಿದ ಎಲ್ಲ ಪ್ರಬಂಧಕರಿಗೆ ಸಮಾರಂಭದ ಕೊನೆಯಲ್ಲಿ ಎಲ್ಲರೂ ಎದ್ದು ನಿಂತು ಅಭಿನಂದನೆ ಸಲ್ಲಿಸಿದರು.

ಒಟ್ಟಿನಲ್ಲಿ ಕರ್ನಾಟಕದಲ್ಲಿ ಎಲ್ಲ ಕಾರ್ಯಕರ್ತರೂ ನಮ್ಮ ಸಂಘಟನೆಯ ಆಂತರಿಕ ಶಕ್ತಿಯ ಅರಿವು ಪಡೆಯಬೇಕೆಂದು ಯೋಜಿಸಲಾಗಿದ್ದ ಈ ಕಾರ್ಯಕ್ರಮ ಒಂದು ಆತ್ಮ ಸಾಕ್ಷಾತ್ಕಾರದ ಪ್ರಯೋಗವಾಗಿತ್ತು. ಪ್ರಚಾರವನ್ನು ಸೀಮಿತಗೊಳಿಸಿ, ಸಮಾವೇಶವು ಭಾವನಾತ್ಮಕವಾಗಿ, ಸರಳವಾಗಿ, ಅಡೆತಡೆರಹಿತವಾಗಿ ನಡೆಯುವ ಬಗ್ಗೆ ಗಮನ ಹರಿಸಲಾಗಿತ್ತು. ಈ ಎಲ್ಲಾ ವಿಷಯಗಳಲ್ಲಿ ಯಶಸ್ಸು ಲಭಿಸಿದೆ. ಕೆಲವೊಂದು ಮಾನವ ಸಹಜ ತಪ್ಪುಗಳ ಹೊರತಾಗಿ ಈ ಸಮಾವೇಶವು ಸಂಖ್ಯೆ, ಸತ್ವ ಹಾಗೂ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಒಂದು ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿದೆ. ಈ ಸಮಾವೇಶವು ನಮ್ಮ ಕಾರ್ಯಕರ್ತರಿಗೆ ಎಂದೂ ಮರೆಯದ ಅನುಭವ ನೀಡಿದ್ದರ ಜೊತೆಗೆ ತಳಮಟ್ಟದಲ್ಲಿ ನಮ್ಮ ಸಂಘಟನೆಯನ್ನು ಬಲಪಡಿಸಲು ಸ್ಫೂರ್ತಿ ನೀಡುವುದೆಂದು ಭಾವಿಸುತ್ತೇವೆ. ಇಲ್ಲಿಂದ ಇನ್ನಷ್ಟು ವಿಚಾರಕ್ಕೆ ಹಾಗೂ ಪದ್ಧತಿಗೆ ಬದ್ಧವಾದ ಸಂಘಟನೆಯ ನಿರ್ಮಾಣವೇ ನಮ್ಮೆಲ್ಲರ ಆಶಯ. ●

ಸಾಂದರ್ಭಿಕ

# ಕೃಷಿ ಬಜೆಟ್: ದೇಶಾದ್ಯಂತ ಚರ್ಚೆಗೆ ಗ್ರಾಸ

- ಎಸ್. ಶಾಂತಾರಾಮ್

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು 2011-12 ನೇ ಸಾಲಿಗೆ ಕೃಷಿ ವಲಯಕ್ಕೆ ಹೆಚ್ಚು ಒತ್ತು ನೀಡುವ ಸಲುವಾಗಿ ಮಂಡಿಸಿರುವ ಕೃಷಿ ಬಜೆಟ್ ಇದೀಗ ದೇಶಾದ್ಯಂತ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.ಕೃಷಿ ವಲಯಕ್ಕೆ ಆದ್ಯತೆ ನೀಡುವ ಸಲುವಾಗಿ ಇಂತಹ ಪ್ರತ್ಯೇಕ ಬಜೆಟ್ ಅಗತ್ಯ ಎಂದು ರಾಷ್ಟ್ರಮಟ್ಟದಲ್ಲಿ ಚಿಂತನೆ ನಡೆಯುವ ಮೊದಲೇ ಇದೇ ಮೊದಲ ಬಾರಿಗೆ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರದಲ್ಲಿ ಇಂತಹ ಕ್ರಮ ಕೈಗೊಂಡಿರುವುದು ರೈತ ಸಮುದಾಯಕ್ಕೆ ಭಾರೀ ಸಂತಸ ಉಂಟುಮಾಡಿದೆ.

ನಮ್ಮ ದೇಶದಲ್ಲಿ ರೈಲ್ವೇ ಇಲಾಖೆಗೆ ಪ್ರತ್ಯೇಕ ಬಜೆಟ್ ಇದೆ.ಆದರೆ ಶೇ 70ಕ್ಕಿಂತ ಅಧಿಕ ಜನರು ಅವಲಂಬಿಸಿರುವ ಕೃಷಿ ವಲಯಕ್ಕೆ ಪ್ರತ್ಯೇಕ ಬಜೆಟ್ ಇಲ್ಲದಿರುವುದು ಬಹುದೊಡ್ಡ ಲೋಪವೇ ಸರಿ.ಇಲಾಖೆಯೊಂದರ ಆರ್ಥಿಕ ವಹಿವಾಟು ಮತ್ತು ದೇಶದ ಬಹುತೇಕ ಜನರಿಗೆ ನೇರವಾಗಿ ಸಂಬಂಧಿಸಿರುವ ರೈಲ್ವೇ ಇಲಾಖೆಗೆ ಇರುವ ಮಹತ್ವ ಗುರ್ತಿಸಿದ ನಮ್ಮ ದೇಶದ ಆಡಳಿತಗಾರರಿಗೆ ಕೃಷಿ ವಲಯಕ್ಕೆ ಇರುವ ಮಹತ್ವ ಇನ್ನೂ ಗಮನಕ್ಕೆ ಬಂದಂತಿಲ್ಲ.ಆದರೆ ರಾಜ್ಯದ ಮಟ್ಟಿಗೆ ಇಂತಹ ಕೊರತೆ ನೀಗುವ ಪ್ರಾಮಾಣಿಕ ಪ್ರಯತ್ನ ನಡೆದಿರುವುದು ನಿಜಕ್ಕೂ ಶ್ಲಾಘನೀಯ.ದೇಶದಲ್ಲೇ ಮೊದಲ ಬಾರಿಗೆ ಇಂತಹ ಅನುಕರಣೀಯ ಕ್ರಮ ಕೈಗೊಂಡಿರುವುದು ಮುಖ್ಯಮಂತ್ರಿ ಯಡಿಯೂರಪ್ಪ ಅವರ ರೈತ ಪರ ಕಳಕಳಿಗೂ ಒಂದು ನಿದರ್ಶನವಾಗಿದೆ.

ಹಾಗೆ ನೋಡಿದರೆ, ರಾಜ್ಯ ಬಿಜೆಪಿ ಸರ್ಕಾರ ಮೊದಲ ವರ್ಷದಿಂದಲೇ ತನ್ನ ಯೋಜನೆಗಳು, ಬಜೆಟ್ ಮೂಲಕ ರೈತಪರ ಕಾಳಜಿಯನ್ನು ತೋರುತ್ತಲೇ ಬಂದಿತ್ತು.ಇದೀಗ ಮತ್ತೊಂದು ಹೆಜ್ಜೆ ಮುಂದಿಟ್ಟಿರುವ ಸರ್ಕಾರ , ಕೃಷಿ ವಲಯದಿಂದ ದೂರ ಸರಿಯುತ್ತಿರುವ ಗ್ರಾಮೀಣ ಜನರನ್ನು ಮತ್ತೆ ಕೃಷಿಯತ್ತ ಆಕರ್ಷಿತರಾಗಲು ಅಗತ್ಯವಾಗಿರುವ ಉತ್ತೇಜಕ ಕ್ರಮಗಳಿಗೆ ಮುಂದಾಗಿರುವುದು ಸ್ವಾಗತಾರ್ಹ.ಕೃಷಿಯನ್ನು ಉದ್ಯಮದ ರೀತಿಯಲ್ಲೇ ಲಾಭದಾಯಕವಾಗಿ ಮಾಡಲು ಸಾಧ್ಯವಿದೆ.ಆದರೆ ಅದಕ್ಕೆ ಬೇಕಾಗಿರುವುದು ಹೆಚ್ಚಿನ ಬಂಡವಾಳ ಹೂಡಿಕೆ.ಕೈಗಾರಿಕೆಗಳಿಗೆ ಕೋಟ್ಯಂತರ ಸಾಲ ನೀಡುವುದರ ಪರವಾಗಿರುವ ಸರ್ಕಾರ ,ರೈತರ ವಿಚಾರ ಬಂದಾಗ ಕೃಷಿ ವಲಯ ಲಾಭದಾಯಕವಲ್ಲ ಎನ್ನುವ ತೀರ್ಮಾನಕ್ಕೆ ಬಂದುಬಿಡುತ್ತದೆ.ಆದರೆ ಕೃಷಿ ವಲಯಕ್ಕೂ ಹೆಚ್ಚಿನ ಬಂಡವಾಳ ಹೂಡಿಕೆಯಾದರೆ ,ಆ ಕ್ಷೇತ್ರವೂ ಕೈಗಾರಿಕೆಗಿಂತ ಲಾಭದಾಯಕವಾಗಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಸಾಗಲು ರಾಜ್ಯ ಸರ್ಕಾರ ಇದೀಗ ಮುಂದಾಗಿದೆ.ಇಡೀ ದೇಶದಲ್ಲಿ ಇಂತಹುದೇ ಚಿಂತನೆ ಆರಂಭವಾದರೆ ಅದರಿಂದ ಮುಂಬರುವ ವರ್ಷಗಳಲ್ಲಿ ಕೃಷಿ ವಲಯದಲ್ಲಿ ಹೊಸ ಶಕೆಯೇ ಆರಂಭವಾದೀತು.

ಕೃಷಿಗೆ ಪ್ರತ್ಯೇಕ ಬಜೆಟ್ ಏಕೆ ಎನ್ನುವ ಬಗ್ಗೆಯೂ ಮುಖ್ಯಮಂತ್ರಿಗಳು ವಿಸ್ತೃತವಾಗಿ ವಿಶ್ಲೇಷಣೆ ನಡೆಸಿರುವುದು ಅವರ ದೂರದರ್ಶಿತ್ವಕ್ಕೆ ಹಿಡಿದ ಕನ್ನಡಿ.ಕೃಷಿ ಹಿಡುವಳಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು , (3.20 ಹೆಕ್ಟೇರ್‌ನಿಂದ 1.63 ಹೆಕ್ಟೇರ್‌ಗೆ ಇಳಿಕೆ)ಕೃಷಿ ವಲಯದಲ್ಲಿನ ಉದ್ಯೋಗಾವಕಾಶ ಶೇ 65ರಿಂದ 61ಕ್ಕೆ ಇಳಿಕೆಯಾಗಿರುವುದು, ಕೃಷಿ ಕ್ಷೇತ್ರದ ಒಟ್ಟಾರೆ ಉತ್ಪಾದನೆಯನ್ನು (ಜಿಡಿಪಿ) ಶೇ 4.5ಕ್ಕೆ ಹೆಚ್ಚಿಸುವ ಗುರಿ ದೇಶದ ಮುಂದಿರುವುದು ಕೂಡಾ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸಲು ಪ್ರೇರಣೆ ನೀಡಿರುವ ಸಂಗತಿಗಳು.

ಕೃಷಿ ವಲಯಕ್ಕೆ ಬಂಡವಾಳ ಕೊರತೆ ಒಂದೆಡೆಯಾದರೆ, ಮತ್ತೊಂದೆಡೆ ಕೃಷಿ ವಿಧಾನ ಮತ್ತು ಕೃಷಿ ಸಂಸ್ಕರಣೆಯಲ್ಲಿ ತಾಂತ್ರಿಕತೆ ಕೊರತೆಯೂ ಕಾಡುತ್ತಿದೆ.ಕೃಷಿ ಸಂಸ್ಕರಣವೂ ಅಪೇಕ್ಷಣೀಯ ಬೆಳವಣಿಗೆ ತೋರುತ್ತಿಲ್ಲ.ಇದರಿಂದ ರೈತರಿಗೆ ಲಾಭದಾಯಕ ಬೆಲೆ ಸಿಗದೇ ರೈತರು ಹತಾಶರಾಗುತ್ತಿದ್ದಾರೆ.ಅಲ್ಲದೇ ಕೃಷಿಯೊಂದಿಗೆ ರೈತರಿಗಿದ್ದ ಭಾವನಾತ್ಮಕ ಸಂಬಂಧವೂ ಶಿಥಿಲವಾಗುವ ಅಪಾಯಕಾರಿ ಪರಿಸ್ಥಿತಿ ಇದೆ.ಇವೆಲ್ಲವನ್ನೂ ಗಮನದಲ್ಲಿಟ್ಟು, ಕೃಷಿ ವಲಯದ ಬೆಳವಣಿಗೆಗೆ ಅಗತ್ಯ ಚಾಲನಾ ಶಕ್ತಿ ನೀಡಲು ಮುಖ್ಯಮಂತ್ರಿಗಳು , ತಮ್ಮ ಕೃಷಿ ಬಜೆಟ್ ಮೂಲಕ ಯತ್ನಿಸಿದ್ದಾರೆ.

ಕೇವಲ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟು ರೈತರನ್ನು ಓಲೈಸಲು ಹಿಂದಿನ ಸರ್ಕಾರಗಳಲ್ಲಿ ರೈತರಿಗೆ ಕೆಲವು ಸೌಲಭ್ಯಗಳನ್ನು ಘೋಷಿಸಿ ತಾವೇ ರೈತರ ಹಿತ ರಕ್ಷಕರು ಎನ್ನುವಂತೆ ಬಿಂಬಿಸಿಕೊಂಡು ರೈತರಿಂದ ಮತ ಗಳಿಸಿದ್ದ ಉದಾಹರಣೆಗಳುಂಟು.ಆದರೆ ಇದೇ ಮೊದಲ ಬಾರಿಗೆ ರಾಜ್ಯ ಬಜೆಟ್ ,ಕೃಷಿ ವಲಯಕ್ಕೆ ಕೇವಲ ಕೆಲವು ತಾತ್ಕಾಲಿಕ ಯೋಜನೆಗಳ ಘೋಷಣೆಗೆ ಸೀಮಿತವಾಗಿಲ್ಲ. ದೀರ್ಘಾವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಆಗಬೇಕಾಗಿರುವ ಸುಧಾರಣೆಯನ್ನು ತರಲು ಸರ್ಕಾರ ಹೊರಟಿರುವುದು ಮೊಟ್ಟ ಮೊದಲ ಕೃಷಿ ಬಜೆಟ್‌ನಲ್ಲೇ ವ್ಯಕ್ತವಾಗಿದೆ. ಮುಂಬರುವ ವರ್ಷಗಳಲ್ಲಿ ಕೃಷಿ ವಲಯಕ್ಕೆ ಮತ್ತಷ್ಟು ಒತ್ತು ಸಿಗಲು ಇದು ಖಂಡಿತವಾಗಿಯೂ ಪೂರಕವಾಗಲಿದೆ.

ರೈತರು ಇಂದು ಸ್ವಾಭಿಮಾನದ ಬದುಕಿಗೆ ಒಂದಲ್ಲಾ ಒಂದು ರೀತಿಯಲ್ಲಿ ಸರ್ಕಾರದ ಅವಲಂಬನೆ ಅನಿವಾರ್ಯ ಎನ್ನುವಂತಹ ಪರಿಸ್ಥಿತಿ ಇದೆ.ತಾವು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಸಿಗುತ್ತದೆ ಎನ್ನುವುದೇ ಖಾತ್ರಿ ಇಲ್ಲದಿದ್ದರೆ , ರೈತನ ಮಾನಸಿಕತೆ ಬದಲಾಗುವುದು ಕಷ್ಟ,ರೈತರಲ್ಲಿ ಇಂದು ಕಷ್ಟ ಪಟ್ಟರೆ ನಾಳೆ ಸುಖ ಎನ್ನುವ ಮನೋಭಾವ ಇತ್ತು .ಆದರೆ ಇಂದು ಕಷ್ಟವೇ ನಿರಂತರ, ಸುಖ ಎನ್ನುವುದು ರೈತನ ಪಾಲಿಗೆ ಮರೀಚಿಕೆಯಾಗಿದೆ.ಕೃಷಿಯಿಂದ ಸ್ವಾವಲಂಬೀ ಜೀವನ ಕಷ್ಟ ಎನ್ನುವ ಮನೋಭಾವ ರೈತ ಸಮುದಾಯದಲ್ಲಿ ಇಂದು ಆಳವಾಗಿ ಬೇರೂರಿದೆ.ಇದರಿಂದಾಗಿ ರೈತರ ಮಕ್ಕಳು ಇಂದು ಕೃಷಿಯನ್ನು ನಂಬಿಕೊಳ್ಳದೇ ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ.ಇದರಿಂದ ನಗರದಲ್ಲೂ ಅಸಮತೋಲನವಾಗುತ್ತಿದೆ.ಗ್ರಾಮೀಣ ಪ್ರದೇಶಗಳೂ ದೇಶದ ಆರ್ಥಿಕತೆಯಲ್ಲಿ ಹೊಂದಿದ್ದ ಪಾಲು ಕುಸಿಯುತ್ತಿದೆ.ತಿನ್ನುವ ಕೈಗಳು ಹೆಚ್ಚುತ್ತಲೇ ಇದೆ , ಆದರೆ ದುಡಿಯುವ ಕೈಗಳು ಹೆಚ್ಚಾಗಿ ಉದ್ಯಮಗಳ ಅವಲಂಬಿಯಾಗುತ್ತಿದೆ.ಇದು ಭಾರತದಂತಹ ಕೃಷಿ ಪ್ರಧಾನ ಆರ್ಥಿಕತೆ ಹೊಂದಿರುವ ರಾಷ್ಟ್ರಕ್ಕೆ ಮಾರಕ.ಅದರ ದುಷ್ಪರಿಣಾಮಗಳನ್ನು ನಾವಿಂದು ನೋಡುತ್ತಲೇ ಇದ್ದೇವೆ.

ನಗರ ಪ್ರದೇಶಕ್ಕೆ ವಲಸೆ ತಡೆಗಟ್ಟಿ ಕೃಷಿ ವಲಯವೇ ಹೆಚ್ಚು ಲಾಭಕಾರಿ ಎನ್ನುವ ಅರಿವನ್ನು ಗ್ರಾಮೀಣ ಯುವಕರಲ್ಲಿ ಮೂಡಿಸಬೇಕಾದ ಅತೀ ಮುಖ್ಯ ಕೆಲಸ ಇಂದು ಆಗಬೇಕಾಗಿದೆ.ಆಹಾರ ಉತ್ಪಾದನೆಯಲ್ಲಿನ ಕುಸಿತ ಗಮನಿಸಿದರೆ, ಮುಂದಿನ ಕೆಲವು ವರ್ಷಗಳ ನಂತರ ದೇಶದ ಆಹಾರ ಅವಶ್ಯಕತೆ ಪೂರೈಸುವುದೂ ನಮಗೆ ಕಷ್ಟವಾದೀತು.ಕೇವಲ ನೌಕರಿ ಆಧಾರಿತ ಆರ್ಥಿಕತೆಯನ್ನು ಉತ್ತೇಜಿಸಿದರೆ ದೇಶದ ಭವಿಷ್ಯ ಉಜ್ವಲವಾಗದು.ತಿಂಗಳ ವೇತನ ಪಡೆಯುವವರಿಗೆ ಎಷ್ಟೇ ಲಾಭ ಹೆಚ್ಚಿದರೂ , ಅದನ್ನು ವೆಚ್ಚ ಮಾಡಿ ಪಡೆಯಬೇಕಾದ ಆಹಾರ ಉತ್ಪನ್ನಗಳ ಕೊರತೆಯಾಗಿಬಿಟ್ಟರೆ, ಅದರಿಂದ ಹಾನಿಯೇ ಹೆಚ್ಚು.ಧಾನ್ಯ ಬೆಳೆಯಬೇಕಾದ ರೈತನ ಮಗ ಇಂದು ನೌಕರಿ ಅರಸಿ ನಗರ ಸೇರಿದ್ದಾನೆ,ಇದರಿಂದಾಗಿ ಗ್ರಾಮೀಣ ಪ್ರದೇಶದ ರೈತ ಕೂಡಾ ತನ್ನ ಮಗನ ನೌಕರಿಯಿಂದಲೇ ಜೀವನ ಸಾಗಿಸುವಂತಹ ಅನಿವಾರ್ಯತೆ ಎದುರಾಗಿದೆ.ಇದು ದೀರ್ಘಾವಧಿಯಲ್ಲಿ ಬೀರುವ ದುಷ್ಪರಿಣಾಮ ಅರಿಯಲೇಬೇಕಾಗಿದೆ.

ಕೇಂದ್ರ ಸರ್ಕಾರ ಕೂಡಾ ರೈಲು ಬಜೆಟ್‌ನಂತೆಯೇ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾಗಿದೆ. ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಮಂಡಿಸಿರುವ ಕೃಷಿ ಬಜೆಟ್ , ಕೇಂದ್ರ ಸರ್ಕಾರ ಹಾಗೂ ಇತರ ರಾಜ್ಯ ಸರ್ಕಾರಗಳಿಗೂ ಒಂದು ಮಾದರಿಯಾಗಿದೆ.ದೇಶ ಸಾಗಬೇಕಾದ ದಾರಿ ಯಾವುದು ಎನ್ನುವುದನ್ನು ಸೂಚಿಸುವ ಸ್ಪಷ್ಟ ದೃಷ್ಟಿಕೋನ ಕೃಷಿ ಬಜೆಟ್‌ಗಿದೆ ಎನ್ನುವ ಸತ್ಯವನ್ನು ದೇಶ ಬೇಗ ಅರಿತಷ್ಟೂ ಒಳ್ಳೆಯದು.ದಕ್ಷಿಣ ಭಾರತದ ಮೊದಲ ಬಿಜೆಪಿ ಸರ್ಕಾರ ಮಂಡಿಸಿರುವ ಪ್ರತ್ಯೇಕ ಕೃಷಿ ಬಜೆಟ್‌ನ ಸಂದೇಶವೇ ಇದು. ●

# ಸಹಕಾರಿ ಪ್ರಕೋಷ್ಠ – ಪ್ರತಿಭಟನೆ

ಸಹಕಾರಿ ಚಳುವಳಿ ಈ ದೇಶದ ಅರ್ಥವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಳೆದ 107 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಜನ ಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಮಹತ್ವದ ಕಾಣಿಕೆಯನ್ನು ಸಲ್ಲಿಸುತ್ತಿದೆ. ಪ್ರಸ್ತುತ ಕರ್ನಾಟಕದಲ್ಲಿ 34,500 ವಿವಿಧ ರೀತಿಯ ಸಹಕಾರ ಸಂಘಗಳು 1959ರ ಕಾಯಿದೆ ಅಡಿಯಲ್ಲಿ ಹಾಗೂ 1600 ಸಹಕಾರಿಗಳು 1997ರ ಕಾಯಿದೆ ಅಡಿಯುಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಟ್ಟಾರೆ 36,000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ರಾಜ್ಯದ ಕೃಷಿಕರ, ಕೃಷಿ ಕೂಲಿಕಾರರ, ದೀನ ದಲಿತರ, ಆರ್ಥಿಕವಾಗಿ ಹಿಂದುಳಿದವರ, ಅಬಲ ವರ್ಗದವರ, ಮಹಿಳೆಯರ ಅಭಿವೃದ್ಧಿಗಾಗಿ ಉತ್ತಮ ಆರ್ಥಿಕ ಸಂಘಟನೆಗಳಿಗಾಗಿ ಕಾರ್ಯನಿರ್ವಹಿಸುತ್ತಿವೆ.

ರಾಜ್ಯದ ಸಹಕಾರ ಕ್ಷೇತ್ರದಲ್ಲಿ 1.98 ಲಕ್ಷ ಸದಸ್ಯರಿದ್ದು, 3,171 ಕೋಟಿ ರೂಪಾಯಿಗಳ ಬಂಡವಾಳ ಇದೆ. 38,249 ಕೋಟಿ ರೂ.ಗಳ ದುಡಿಯುವ ಬಂಡವಾಳವಿದ್ದು, 11,548 ಕೋಟಿ ರೂ.ಗಳ ಠೇವಣಿ ಇದೆ. 19,318 ಸಹಕಾರ ಸಂಘಗಳು ಲಾಭದಲ್ಲಿವೆ.

ಈ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಹಕಾರ ಚಳುವಳಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ವೈದ್ಯನಾಥನ್ ಕಮಿಟಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಕ್ರಮವಿಡಲಾಗಿದೆ. ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಲಾಗಿದೆ. ನಿಷ್ಕ್ರಿಯಗೊಂಡಿದ್ದ ಅನೇಕ ಸಹಕಾರಿ ಸಂಸ್ಥೆಗಳನ್ನು ಪುನಶ್ಚೇತನಗೊಳಿಸಲಾಗಿದೆ. ವಿಶೇಷವಾಗಿ ಕೋಲಾರ, ಬೆಂಗಳೂರು, ಧಾರವಾಡ, ಬೀದರ್, ಗುಲ್ಬರ್ಗಾ ಡಿ.ಸಿ.ಸಿ. ಬ್ಯಾಂಕ್‌ಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯ ಕೃಷಿ ಸಹಕಾರ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಪುನಶ್ಚೇತನಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳುವುದರಲ್ಲಿ ದೇಶದಲ್ಲಿಯೇ ನಮ್ಮ ಸರ್ಕಾರ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ನಮ್ಮ ರಾಜ್ಯದ ರೈತರಿಗೆ 3%ರ ಬಡ್ಡಿದರದಲ್ಲಿ ವ್ಯವಸಾಯ ಸಾಲ ನೀಡಲಾಗುತ್ತಿದೆ. ಕಳೆದ ವರ್ಷ 7 ಲಕ್ಷ ರೈತರಿಗೆ ಸಾಲ ನೀಡಲಾಗಿದ್ದು, ಈ ವರ್ಷ 9 ಲಕ್ಷ ರೈತರಿಗೆ ಸಾಲ ನೀಡಲಾಗಿದೆ. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಮೂಲಕ ರಾಜ್ಯದ ರೈತರಿಗೆ ರಸಗೊಬ್ಬರ ಹಾಗೂ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ. ರಾಜ್ಯದ ರೈತರಿಗೆ ಕರ್ನಾಟಕ ಹಾಲು ಮಹಾಮಂಡಳಿ ಮೂಲಕ ಹಾಲಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿರುವ ಈ ಸಹಕಾರಿ ಕ್ಷೇತ್ರಕ್ಕೆ ಕೇಂದ್ರ ಸರ್ಕಾರವು ನೇರ ತೆರಿಗೆ ವಿಧೇಯಕವನ್ನು ಜಾರಿಗೊಳಿಸುವುದರ ಮೂಲಕ ಕೊಡಲಿಪೆಟ್ಟನ್ನು ಕೊಡುವುದಕ್ಕೆ ಮುಂದಾಗಿದೆ. ಈ ವಿಧೇಯಕವನ್ನು ಜಾರಿಗೊಳಿಸುವುದರಿಂದಾಗಿ ಸಹಕಾರಿ ಕ್ಷೇತ್ರಕ್ಕೆ ದೊಡ್ಡ ಹಿನ್ನೆಡೆಯಾಗಿ ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿಗೆ ತೊಂದರೆಯಾಗುತ್ತದೆ. ಆದ್ದರಿಂದ ಬಿಜೆಪಿಯು ಕೇಂದ್ರದ ಈ ಕ್ರಮವನ್ನು ವಿರೋಧಿಸುತ್ತದೆ. ಈ ಸಂಬಂಧವಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ದಿನಾಂಕ 25-02-2011ರಂದು ಜಿಲ್ಲಾ ಪತ್ರಿಕಾಗೋಷ್ಠಿ ಹಾಗೂ ದಿನಾಂಕ 01-03-2011ರಂದು ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಎಲ್ಲಾ ಜಿಲ್ಲೆಗಳಲ್ಲೂ ಧರಣಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದ ಬಗ್ಗೆ ವರದಿಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಸಹಕಾರಿ ಪ್ರಕೋಷ್ಠದ ರಾಷ್ಟ್ರೀಯ ಸಂಚಾಲಕ ಶ್ರೀ ಧನಂಜಯ್‌ಕುಮಾರ್ ಸಿಂಗ್‌ರವರು ಬೆಂಗಳೂರಿಗೆ ಭೇಟಿ ಇತ್ತು ಸಭೆ ನಡೆಸಿದರು.

ಫೆಬ್ರವರಿ 7ರಂದು ದೆಹಲಿಯಲ್ಲಿ ದೇಶದಾದ್ಯಂತ ಆಗಮಿಸಿದ ಸತ್ಯಾಗ್ರಹಿಗಳು ಕೇಂದ್ರದ ಈ ಕ್ರಮವನ್ನು ವಿರೋಧಿಸಿ ಪ್ರತಿಭಟಿಸಿದರು. ಪ್ರಧಾನ ಮಂತ್ರಿಗಳಿಗೆ ಕೇಂದ್ರದ ಈ ನಡೆಯನ್ನು ವಿರೋಧಿಸಿ ಮನವಿಸಲ್ಲಿಸಿದರು. ಕರ್ನಾಟಕದಿಂದಲೂ ಸತ್ಯಾಗ್ರಹಿಗಳ ತಂಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿತ್ತು. ದೇಶಾದ್ಯಂತ 10 ಸಾವಿರಕ್ಕೂ ಹೆಚ್ಚು ಸಹಕಾರಿಗಳು ಈ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ●

# ಕೇಂದ್ರ ಸರ್ಕಾರದ ಹಗರಣಗಳ ವಿರುದ್ಧ ಯುವ ಮೋರ್ಚಾ ಪ್ರತಿಭಟನೆ

ಮಾರ್ಚ್, ಏಪ್ರೀಲ್‌ನಲ್ಲಿ ರಾಷ್ಟ್ರದಾದ್ಯಂತ ಯುವ ಮೋರ್ಚಾ ಕಾರ್ಯಕರ್ತರು ಕೇಂದ್ರದ ಯು.ಪಿ.ಎ. ಸರ್ಕಾರದ ಹಗರಣಗಳಾದ ಕಾಮನ್‌ವೆಲ್ತ್ ಗೇಮ್ಸ್, 2ಜಿ ಸ್ಪೆಕ್ಟ್ರಂ, ಇಸ್ರೋ, ಆದರ್ಶ ಹೌಸಿಂಗ್, ಈಶಾನ್ಯ ರಾಜ್ಯ ಅಭಿವೃದ್ಧಿ ನಿಧಿ ದುರುಪಯೋಗ ಅಂತಹ ಲಕ್ಷಾಂತರ ಕೋಟಿ ಹಗರಣಗಳ ವಿರುದ್ಧ ಇಡೀ ರಾಜ್ಯದಾದ್ಯಂತ ಹೋರಾಟ ಕೈಗೆತ್ತಿಕೊಂಡಿದೆ. ಪ್ರತೀ ಮಂಡಲದಲ್ಲಿ ಪ್ರತಿಭಟನೆ, ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಪಾದಯಾತ್ರೆ, ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ, ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನಲ್ಲಿ ದಿನಾಂಕ 12-03-2011ರಂದು ಮಾನವ ಸರಪಳಿಯ ಮುಖಾಂತರ ಪ್ರತಿಭಟನೆ, ದಿನಾಂಕ 19-03-2011ರಂದು ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಅನುರಾಗ್ ಸಿಂಗ್ ಠಾಕೂರ್‌ರವರ ನೇತೃತ್ವದಲ್ಲಿ ಬೃಹತ್ ರ್‍ಯಾಲಿ ಮತ್ತು ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಕೇಂದ್ರದ ಎಲ್ಲಾ ಹಗರಣಗಳ ವಿವರ, ವರದಿಗಳನ್ನು ಪ್ರತೀ ಯುವಕರಿಗೆ ತಿಳಿಸುವ ಕಾರ್ಯವನ್ನು ಯುವ ಮೋರ್ಚಾದ ಕಾರ್ಯಕರ್ತರು ಪ್ರತೀ ಬೂತ್ ಮಟ್ಟದಲ್ಲಿ, ಶಕ್ತಿ ಕೇಂದ್ರಗಳಲ್ಲಿ ಮಾಡುತ್ತದೆ. ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಯುವ ಮೋರ್ಚಾದ ಅಧ್ಯಕ್ಷರಿಂದ ಪತ್ರಿಕಾಗೋಷ್ಠಿ, ವಿಚಾರ ಸಂಕಿರಣಗಳು, ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ, ಪ್ರತಿ ಸರ್ಕಲ್‌ಗಳಲ್ಲಿ ಸಹಿ ಸಂಗ್ರಹ ಮುಂತಾದ ವಿನೂತನ ಚಳುವಳಿಗಳನ್ನು ಯೋಜಿಸಲಾಗಿದೆ. ಇಡೀ ದೇಶಕಕೆ ಗಂಡಾಂತರವಾಗಿರುವ ಯುಪಿಎ ಸರ್ಕಾರದ ಹಗರಣಗಳ ಬಗ್ಗೆ ಯುವಕರ ಜಾಗೃತಿ ಮೂಡಿಸಿ, ಹೋರಾಟ ಮಾಡುವ ಕಾರ್ಯ ಯುವ ಮೋರ್ಚಾ ಮಾಡುತ್ತದೆ. ●

## ಶ್ರದ್ಧಾಂಜಲಿ

ರಾಜ್ಯ ಬಿಜೆಪಿ ಎಸ್.ಸಿ. ಮೋರ್ಚಾ ಕೋಶಾಧ್ಯಕ್ಷ ಶ್ರೀ ಕಲ್ಕುಣಿ ಮಹದೇವಯ್ಯನವರು ನಿಧನರಾಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅವರು ಮಳವಳ್ಳಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಶ್ರೀಯುತರ ನಿಧನಕ್ಕೆ ತೀವ್ರ ಸಂತಾಪಗಳು.

–ಸಂಪಾದಕರು

# ರಾಜ್ಯ ಬಿಜೆಪಿ ಕಾನೂನು ಹಾಗೂ ಶಾಸಕಾಂಗ ಪ್ರಕೋಷ್ಠ ಉದ್ಘಾಟನೆ

ರಾಜ್ಯದಲ್ಲಿ ನೂತನವಾಗಿ ಆರಂಭಿಸಲಾಗಿರುವ ಬಿಜೆಪಿ ಕಾನೂನು ಮತ್ತು ಶಾಸಕಾಂಗ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಭೂಪೇಂದ್ರ ಯಾದವ್‌ರವರು ವಕೀಲರು ಜನರ ಸಮಸ್ಯೆಗಳತ್ತ ಸರಕಾರದ ಗಮನ ಸೆಳೆಯಬೇಕು ಎಂದು ಸಲಹೆ ಮಾಡಿದರು. ವಕೀಲರು ಸಮಾಜದ ಕಾವಲುಗಾರರಾಗಿ ಕಾರ್ಯ ನಿರ್ವಹಿಸಬೇಕು. ಸಮಾಜದ ಅಂಕು-ಡೊಂಕು ತಿದ್ದಲು ಸರಕಾರಕ್ಕೆ ಸೂಕ್ತ ಸಲಹೆ, ಮಾರ್ಗದರ್ಶನ ಮಾಡಬೇಕು ಎಂದು ಅವರು ತಿಳಿಸಿದರು.

ಹೊಸದಿಲ್ಲಿಯಲ್ಲಿ ಏಪ್ರಿಲ್ 24ರಂದು ಬಿಜೆಪಿ ಕಾನೂನು ಮತ್ತು ಶಾಸಕಾಂಗ ಘಟಕದ ಒಂದು ದಿನದ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು ಎಂದು ಶ್ರೀ ಭೂಪೇಂದ್ರ ಯಾದವ್‌ರವರು ತಿಳಿಸಿದರು.

"ಆಡಳಿತದಲ್ಲಿ ಪಾರದರ್ಶಕತೆ ಮತ್ತು ವಕೀಲರ ಪಾತ್ರ" ವಿಷಯ ಕುರಿತ ಸಮಾವೇಶದಲ್ಲಿ 25 ಸಾವಿರ ವಕೀಲರು ಪಾಲ್ಗೊಳ್ಳಲಿದ್ದು ಬಿಜೆಪಿ ಮುಖಂಡ ಶ್ರೀ ಅರುಣ್ ಜೇಟ್ಲಿ ಉದ್ಘಾಟಿಸಲಿದ್ದಾರೆ ಎಂದು ಅವರು ಹೇಳಿದರು.

ವಿದೇಶಿ ಬ್ಯಾಂಕುಗಳಲ್ಲಿರುವ ಕಪ್ಪು ಹಣ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳ, 2ಜಿ ಸ್ಪೆಕ್ಟ್ರಂ ಸೇರಿದಂತೆ ಕೇಂದ್ರ ಸರ್ಕಾರದ ಅವ್ಯವಹಾರಗಳನ್ನು ವಿರೋಧಿಸುವುದು ಈ ಸಮಾವೇಶ ಉದ್ದೇಶ ಎಂದು ಅವರು ಹೇಳಿದರು.

ಘಟಕ ಉದ್ಘಾಟಿಸಿ ಮಾತನಾಡಿದ ರಾಜ್ಯದ ಕಾನೂನು ಸಚಿವ ಶ್ರೀ ಎಸ್. ಸುರೇಶ್‌ಕುಮಾರ್, ಮುಂದಿನ ದಿನಗಳಲ್ಲಿ ಇತರೆ ಕ್ಷೇತ್ರಗಳಲ್ಲಿಯೂ ಬಿಜೆಪಿ ಘಟಕಗಳನ್ನು ರಚಿಸಲಾಗುವುದು ಎಂದರು.

ಪ್ರಕೋಷ್ಠದ ರಾಷ್ಟ್ರೀಯ ಸಹ ಸಂಚಾಲಕರಾದ ಶ್ರೀ ಎಂ. ಬಿ. ಜಿರಲಿ ಹಾಗೂ ಶ್ರೀ ಬಾಲಸುಬ್ರಹ್ಮಣ್ಯರವರು ಈ ಸಂದರ್ಭದಲ್ಲಿ ಮಾತನಾಡಿ ಸಮಾಜ ಹಾಗೂ ದೇಶದ ಉನ್ನತಿಗೆ ಕಾನೂನು ಪ್ರಕೋಷ್ಠ ಕಾರ್ಯತತ್ಪರವಾಗಿರಬೇಕೆಂದು ಕರೆ ನೀಡಿದರು.

ಬಿಜೆಪಿ ಕಾನೂನು ಮತ್ತು ಶಾಸಕಾಂಗ ಘಟಕದ ನೂತನ ಸಂಚಾಲಕ ಶ್ರೀ ವಿವೇಕ್ ರೆಡ್ಡಿ ಹಾಗೂ ಸಹ ಸಂಚಾಲಕ ಶ್ರೀ ವಿನೋದ್ ರೆಡ್ಡಿ ಉಪಸ್ಥಿತರಿದ್ದರು. ರಾಜ್ಯದ ಎಲ್ಲಾ ವಿಭಾಗಗಳಲ್ಲಿ ಕಾನೂನು ಹಾಗೂ ಶಾಸಕಾಂಗ ಪ್ರಕೋಷ್ಠದ ಮೂಲಕ ಕಾರ್ಯಾಗಾರಗಳನ್ನು ನಡೆಸುವ ಬಗ್ಗೆಯೂ ಈ ಸಂದರ್ಭದಲ್ಲಿ ನಿರ್ಣಯ ಕೈಗೊಳ್ಳಲಾಯಿತು. ●

# ತಮಿಳುನಾಡು ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿ-ಶ್ರೀ ಈಶ್ವರಪ್ಪ

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವಂತೆ ತಮ್ಮ ಸಂಬಂಧಿಕರು ಮತ್ತು ಸ್ನೇಹಿತರಿಗೆ ತಿಳಿಸುವಂತೆ ರಾಜ್ಯ ಬಿಜೆಪಿ ಅಧ್ಯಕ್ಷ ಶ್ರೀ ಕೆ.ಎಸ್.ಈಶ್ವರಪ್ಪ ಬೆಂಗಳೂರಿನಲ್ಲಿ ನೆಲೆಸಿರುವ ತಮಿಳರಿಗೆ ಮನವಿ ಮಾಡಿದ್ದಾರೆ.

ತಮಿಳುನಾಡು ವಿಧಾನಸಭೆ ಚುನಾವಣೆಯ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಜಾತಿ, ಭಾಷೆ ಎಲ್ಲವನ್ನೂ ಮೀರಿ ಭಾರತೀಯರೆಲ್ಲ ಒಂದು ಎನ್ನುವ ಸಿದ್ಧಾಂತದಡಿ ಪಕ್ಷ ಕೆಲಸ ಮಾಡುತ್ತಿದೆ. ತಮಿಳುನಾಡು ಚುನಾವಣೆಯಲ್ಲಿ ಕರ್ನಾಟಕದ ಬಿಜೆಪಿ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಲಿದ್ದಾರೆ ಎಂದರು. ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಶ್ರೀ ಪೊನ್ನು ರಾಧಾಕೃಷ್ಣನ್ ಮಾತನಾಡಿ, ತಮಿಳುನಾಡಿನಲ್ಲಿ ಬಿಜೆಪಿಯ ಜ್ಯೋತಿ ಬೆಳಗಲು ಸಹಕರಿಸುವಂತೆ ಮನವಿ ಮಾಡಿದರು. ದಶಕಗಳಿಂದ ಕಾಂಗ್ರೆಸ್ಸಿಗರು ತಿರುವಳ್ಳುವರ್ ಪ್ರತಿಮೆಗೆ ಹೊದಿಸಿದ್ದ ತೆರೆ ಸರಿಸಿ ಸಾಮರಸ್ಯ ಮೂಡಿಸಲು ಶ್ರೀ ಯಡಿಯೂರಪ್ಪ ಅವರು ಬರಬೇಕಾಯಿತು. ತಿರುವಳ್ಳುವರ್ ಬಗ್ಗೆ ಗೌರವವಿಲ್ಲದ ಕಾಂಗ್ರೆಸ್ ಕೇವಲ ಮತಬ್ಯಾಂಕ್ ರಾಜಕಾರಣ ಮಾಡುತ್ತಿದೆ ಎಂದು ಅವರು ದೂರಿದರು.

ಮಾಜಿ ಸಚಿವ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಶ್ರೀ ನಿರ್ಮಲ್ ಕುಮಾರ್ ಸುರಾನ, ರಾಜ್ಯ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಸಂತೋಷ್ ಮೊದಲಾದವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ●

# ರಾಷ್ಟ್ರೀಯ ರೈತ ಮೋರ್ಚಾದ 'ಕಿಸಾನ್ ವಿಕಾಸ ಶಿಬಿರ'

ದಿನಾಂಕ 26, 27 ಫೆಬ್ರವರಿ 2011ರಂದು ಛತ್ತೀಸ್‌ಗಡದ ರಾಯಪುರದಲ್ಲಿ ಬಿಜೆಪಿಯ ರಾಷ್ಟ್ರೀಯ ಕಿಸಾನ್ ಮೋರ್ಚಾ ಕಾರ್ಯಕಾರಿಣಿ ಹಾಗೂ ಕಿಸಾನ್ ವಿಕಾಸ್ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ರಾಷ್ಟ್ರದಾದ್ಯಂತ ಕಿಸಾನ್ ಮೋರ್ಚಾದ ಜಿಲ್ಲಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳ ಮೇಲ್ಪಟ್ಟ ಕಾರ್ಯಕರ್ತರು ಅಪೇಕ್ಷಿತರಾಗಿದ್ದರು. ಕರ್ನಾಟಕ ರಾಜ್ಯದಿಂದ ಒಟ್ಟು 80 ಮಂದಿ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಷ್ಟ್ರೀಯ ಕಿಸಾನ್ ಮೋರ್ಚಾ ಕಾರ್ಯಕಾರಿಣಿಯನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಗತ್ ಪ್ರಕಾಶ್ ನಡ್ಡಾ ಉದ್ಘಾಟಿಸಿ ಮಾತನಾಡುತ್ತಾ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ಟೀಕಿಸಿ ಬಿಜೆಪಿಯ ರೈತ ಪರವಾದ ಚಿಂತನೆಗಳನ್ನು ವಿವರಿಸಿದರು.

ಪ್ರಕೋಷ್ಠ ಹಾಗೂ ಮೋರ್ಚಾಗಳ ಸಮನ್ವಯ ಅಧಿಕಾರಿಗಳಾದ ಶ್ರೀ ಮಹೇಂದ್ರ ಪಾಂಡೆಯವರು ಈ ಸಂದರ್ಭದಲ್ಲಿ ಮಾತನಾಡಿದರು. ಅಖಿಲ ಭಾರತೀಯ ಕಿಸಾನ್ ವಿಚಾರ ಶಿಬಿರವನ್ನು ಮಾಜಿ ಕೇಂದ್ರ ಕೃಷಿ ಸಚಿವರಾದ ಶ್ರೀ ರಾಜನಾಥ್‌ಸಿಂಗ್‌ರವರು ಉದ್ಘಾಟಿಸಿ ಮಾತನಾಡುತ್ತಾ ಕೃಷಿಕರಿಗೆ ಎನ್.ಡಿ.ಎ. ಸರ್ಕಾರ ನೀಡಿದ ಯೋಜನೆಗಳನ್ನು ವಿವರಿಸಿದರು.

ನಂತರ ನಡೆದ ಅವಧಿಯಲ್ಲಿ ರೈತರ ಆತ್ಮಹತ್ಯೆಗೆ ಸಂಬಂಧಿಸಿದ ನಿರ್ಣಯವನ್ನು ಮಂಡಿಸಿ ಈ ಕೃತ್ಯವನ್ನು ತಡೆಯುವ ಅಂಶಗಳ ಬಗ್ಗೆ ನಿರ್ಣಯವನ್ನು ಕೈಗೊಳ್ಳಲಾಯಿತು. ಛತ್ತೀಸ್‌ಗಡ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ರಮಣ್‌ಸಿಂಗ್‌ರವರು ಮಾತನಾಡಿ ತಮ್ಮ ರಾಜ್ಯದ ರೈತಪರ ಯೋಜನೆಗಳನ್ನು ವಿವರಿಸಿದರು.

ನಂತರದ ಗೋಷ್ಠಿಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ರಾಜ್ಯವಾರು ತಿಳಿಸಲಾಯಿತು. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ನದಿನೀರಿನ ಹಂಚಿಕೆ, ರಾಯಚೂರು ಶಾಖ ವಿದ್ಯುತ್‌ಗಾರಕ್ಕೆ ನೀಡುತ್ತಿರುವ ಕಲ್ಲಿದ್ದಲಿನ ಕೊರತೆ ಹಾಗೂ ಗುಣಮಟ್ಟ ಮತ್ತು ಗೋ ಹತ್ಯೆ ನಿಷೇಧ ಕಾಯ್ದೆಯನ್ನು ತಡೆಹಿಡಿದಿರುವ ಬಗ್ಗೆ ರೈತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕರನಾರಾಯಣರೆಡ್ಡಿಯವರು ವಿವರಿಸಿದರು.

ಈ ಕಾರ್ಯಕ್ರಮದ ಸಮಾರೋಪವನ್ನು ಮಾನ್ಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ನಿತಿನ್ ಗಡ್ಕರಿಯವರು ನೆರವೇರಿಸಿ ಮಾತನಾಡುತ್ತಾ ಎನ್‌ಡಿಎ ಅವಧಿಯಲ್ಲಿ ಜಾರಿಗೊಂಡ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಹಾಗೂ ಇತರೆ ರೈತಪರ ಯೋಜನೆಗಳನ್ನು ವಿವರಿಸಿ ಯುಪಿಎ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿದರು. ಈ ಶಿಬಿರಕ್ಕೆ ಕರ್ನಾಟಕ ರಾಜ್ಯದ ಅಪೇಕ್ಷಿತರು ಸ್ವಂತ ಖರ್ಚಿನಲ್ಲಿ ತೆರಳಿ ಭಾಗವಹಿಸಿದ್ದರು. ●

# ರಾಜ್ಯ ಮುಂಗಡ ಪತ್ರ ಮಂಡನೆ

## ಇತಿಹಾಸ ಸೃಷ್ಟಿಸಿದ ಕೃಷಿ ಬಜೆಟ್

ಕರ್ನಾಟಕ ಇತಿಹಾಸ ಸೃಷ್ಟಿಸಿದೆ. ಪ್ರಪ್ರಥಮ ಬಾರಿಗೆ ಕೃಷಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ನಾಡಿನ ರೈತವಲಯದಲ್ಲಿ ಸಂಚಲನ ಮೂಡಿಸಿದ್ದಾರೆ. ಶೇ.1ರ ಬಡ್ಡಿ ದರದಲ್ಲಿ ಸಾಲ, ಕೃಷಿಕರ ಮಕ್ಕಳ ಉನ್ನತ ಶಿಕ್ಷಣಕ್ಕೆ ಬಡ್ಡಿ ರಹಿತ ಸಾಲ, 10 ಲಕ್ಷ ರೈತ ಕುಟುಂಬಗಳನ್ನು ಸುವರ್ಣ ಭೂಮಿ ಯೋಜನೆ ವ್ಯಾಪ್ತಿಗೆ ಒಳಪಡಿಸುವುದು, ಜಾಗತಿಕ ಕೃಷಿ ಬಂಡವಾಳ ಸಮಾವೇಶ... ಹೀಗೆ ಉಡುಗೊರೆಗಳ ಮಹಾಪೂರವನ್ನೇ ಹರಿಸುವ ಮೂಲಕ ಅತಿಸಣ್ಣ ರೈತನಿಂದ ಮೊದಲ್ಗೊಂಡು ಎಲ್ಲ ರೈತರ ಅಭಿವೃದ್ಧಿಗೆ ಪಣ. ಇವೆಲ್ಲ ಸಾಕಾರಗೊಂಡಿದ್ದೇ ಆದರೆ, ಕರ್ನಾಟಕದಲ್ಲಿ ಹಸಿರು ಕ್ರಾಂತಿ ಶತಃಸಿದ್ಧ.

ಹೆಚ್ಚು ತೆರಿಗೆ ಹೊರೆಗಳಿಲ್ಲದ , ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯ ಮೂಲಕ ಕರ್ನಾಟಕದ ಸಮಗ್ರ ಪ್ರಗತಿಯ ದೃಷ್ಟಿಕೋನವನ್ನೊಳಗೊಂಡ 85, 319 ಕೋಟಿ ರೂ. ಗಳ ನೂತನ ಸಾಲಿನ ಮುಂಗಡ ಪತ್ರವನ್ನು ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ಮಂಡಿಸಿದರಲ್ಲದೇ, ಇದೇ ಪ್ರಥಮ ಬಾರಿಗೆ ಕೃಷಿ ಮತ್ತು ನೀರಾವರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿ ಹೊಂದಿದ 2011-12 ನೇ ಸಾಲಿನ ಕೃಷಿ ಬಜೆಟ್ ಮಂಡಿಸಿದ ಏಕೈಕ ಮುಖ್ಯಮಂತ್ರಿ ಎಂಬ ಖ್ಯಾತಿಗೂ ಪಾತ್ರರಾದರು.

ವಿಧಾನಸಭೆಯಲ್ಲಿ ಮಂಡಿಸಿದ 17,857 ಕೋಟಿ ರೂ. ಗಳ ಅಂದಾಜಿನ ಪ್ರಥಮ ಕೃಷಿ ಬಜೆಟ್ ಕೃಷಿ, ನೀರಾವರಿ, ಮೀನುಗಾರಿಕೆ ಸೇರಿದಂತೆ ರೈತರಿಗೆ ನೆರವಾಗುವ ವಿವಿಧ ಯೋಜನೆಗಳನ್ನೊಳಗೊಂಡಿದೆ.

ಇದಲ್ಲದೇ ಮುಖ್ಯಮಂತ್ರಿ ಮಂಡಿಸಿರುವ ಸಾಮಾನ್ಯ ಮುಂಗಡ ಪತ್ರದಲ್ಲಿ ಮುಂಬರುವ ಆರ್ಥಿಕ ವರ್ಷದಲ್ಲಿ ಒಟ್ಟು 43 ಸಾವಿರ ಕೋಟಿಗೂ ಹೆಚ್ಚು ತೆರಿಗೆ ಆದಾಯವನ್ನು ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದ್ದು ಸುಮಾರು 294.78 ಕೋಟಿ ರೂ. ಗಳ ಉಳಿತಾಯ ಬಜೆಟ್ ಇದಾಗಿದೆ.

ಈ ಮೂಲಕ ರಾಜ್ಯವನ್ನು ಸಂಭವನೀಯ ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು ಹಣಕಾಸು ಖಾತೆಯನ್ನೂ ಹೊತ್ತಿರುವ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ದೃಢ ಸಂಕಲ್ಪ ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ಕೇಂದ್ರ ಸರ್ಕಾರ ಮಂಡಿಸಲಿರುವ ಮುಂಗಡ ಪತ್ರವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಬಜೆಟ್‌ಗೆ ಅಂತಿಮ ಸ್ಪರ್ಶ ನೀಡಲು ಮುಖ್ಯಮಂತ್ರಿಯವರು ನಿರ್ಧರಿಸಿದ್ದಾರೆ.

### ಹಸಿರು ಕ್ರಾಂತಿ

ಸತತ ಆರನೇ ಬಾರಿ ರಾಜ್ಯದ ಮುಂಗಡ ಪತ್ರ ಮಂಡಿಸಿದ ಅದೃಷ್ಟಶಾಲಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ದೇಶದಲ್ಲೇ ಮೊದಲ ಬಾರಿಗೆ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸುವ ಮೂಲಕ ತಮ್ಮದು ರೈತ ಪರ ಸರ್ಕಾರ ಎಂದು ಮತ್ತೊಮ್ಮೆ ಸಾರಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ಯಾವುದೇ ರಾಜ್ಯ ಸರ್ಕಾರಗಳು ಯೋಚಿಸುವ ಮೊದಲೇ ಕೃಷಿಗೆ ವಿಶೇಷ ಆದ್ಯತೆ ನೀಡುವ ಮಹತ್ವದ ನಿರ್ಣಯ ಕೈಗೊಂಡು ರೈತರಿಗೆ ಶೇ. 1ರ ಬಡ್ಡಿದರದಲ್ಲಿ ಸಹಕಾರ ಸಂಘಗಳ ಸಾಲ ದೊರಕಿಸುವ ಮಹತ್ವದ ಘೋಷಣೆಯೂ ಈ ಸಲದ ಬಜೆಟ್‌ನ ಪ್ರಮುಖಾಂಶ. ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ವಿಧಾನಸಭೆಯಲ್ಲಿ ಮಂಡಿಸಿರುವ 2011-12ನೇ ಸಾಲಿನ ಬಜೆಟ್, ಕೃಷಿ ವಲಯಕ್ಕೆ ನೀಡಲಾಗುವ ಆದ್ಯತೆಯನ್ನು 40 ಪುಟಗಳಲ್ಲಿ ವಿವರಿಸಲಾಗಿದ್ದು, ನಾಡಿನ ಅನ್ನದಾತನಿಗೆ ಗರಿಷ್ಠ ಆದ್ಯತೆ ನೀಡುವ ಅನೇಕ ಪ್ರಮುಖ ಯೋಜನೆಗಳನ್ನು ಒಳಗೊಂಡಿದೆ.

ಕೃಷಿಯಿಂದ ವಿಮುಖರಾಗುತ್ತಿರುವ ರೈತ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ನೀಡಿ ಕೃಷಿ ಉತ್ಪಾದನೆಯಲ್ಲಿನ ಕುಸಿತ ತಡೆಯುವ ಕ್ರಾಂತಿಕಾರಿ ಚಿಂತನೆ ಮುಖ್ಯಮಂತ್ರಿಗಳದ್ದಾಗಿದೆ. ಇದಕ್ಕೆ ಪೂರಕವಾಗಿ ಹಲವಾರು ಉಪಕ್ರಮಗಳಿಗೆ ಚಾಲನೆ ನೀಡಿರುವುದು ಈ ಬಾರಿಯ ಕೃಷಿ ಬಜೆಟ್‌ನ ವಿಶೇಷ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವಿಶೇಷ ಒತ್ತು ನೀಡಲಾಗಿರುವ ಸಾವಯವ ಕೃಷಿಗೆ ಈ ಬಾರಿ 200ಕೋಟಿ ರೂ. ಲಭ್ಯವಾಗಲಿದೆ. ಜೈವಿಕ ಇಂಧನ ಪ್ರೋತ್ಸಾಹಕ್ಕೆ 125ಕೋಟಿ, ಹನಿ ಮತ್ತು ತುಂತರು ನೀರಾವರಿ ಸಹಾಯಧನಕ್ಕೆ 100 ಕೋಟಿ8 ರೂ. ಕೃಷಿ ಯಂತ್ರೋಪಕರಣಗಳಿಗೆ ಹೆಚ್ಚಿನ ಸಹಾಯಧನಕ್ಕೆ 100 ಕೋಟಿ ರೂ. ಭೂ-ಚೇತನ ಕಾರ್ಯಕ್ರಮಗಳನ್ನು 30 ಜಿಲ್ಲೆಗಳಿಗೂ ವಿಸ್ತರಿಸಲು 40 ಕೋಟಿ ರೂಪಾಯಿಗಳನ್ನು ಮುಖ್ಯಮಂತ್ರಿಯವರು ಒದಗಿಸಿದ್ದಾರೆ. ಈ ಯೋಜನೆಯ ಲಾಭ 30 ಲಕ್ಷ ರೈತರಿಗೆ ದೊರೆಯಬೇಕು ಎನ್ನುವುದು ಮುಖ್ಯಮಂತ್ರಿಗಳ ಆಶಯವಾಗಿದೆ.

### ಬಜೆಟ್ ಮಂಡನೆಗೆ ಮುನ್ನ ಕಾಲ್ನಡಿಗೆಯಲ್ಲೇ ಸಾಗಿದ ಮುಖ್ಯಮಂತ್ರಿಯವರು.

ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸುವ ಮೂಲಕ ಇತಿಹಾಸದಲ್ಲಿ ಹೊಸದೊಂದು ಮುನ್ನುಡಿ ಬರೆದಿರುವ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಪ್ರಸಕ್ತ ಸಾಲಿನ ಮುಂಗಡಪತ್ರದ ಪ್ರತಿಯುಳ್ಳ ಬ್ರೀಫ್ ಕೇಸ್ ಹಿಡಿದು ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ತಮ್ಮ ನಿವಾಸದಿಂದ ಚಾಲುಕ್ಯ ವೃತ್ತದವರೆಗೆ ಕಾಲ್ನಡಿಗೆಯಲ್ಲೆ ತೆರಳಿ ಹೊಸ ಇತಿಹಾಸ ನಿರ್ಮಿಸಿದರು.

ಬೆಳಗ್ಗೆ 10ಗಂಟೆ 5ನಿಮಿಷಕ್ಕೆ ಸರಿಯಾಗಿ ಸಾವಿರಾರು ರೈತರ ಜತೆಯಲ್ಲಿ ಹಸಿರು ಶಾಲು ಹೊದ್ದು ಮನೆಯಿಂದ ಹೊರಟ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿಯವರಿಗೆ ಸುಮಾರು 15ಸಾವಿರಕ್ಕೂ ಹೆಚ್ಚು ರೈತರು ರೇಸ್‌ಕೋರ್ಸ್ ರಸ್ತೆಯಲ್ಲಿ ಭವ್ಯ ಸ್ವಾಗತ ಕೋರಿದರು.

ದಾರಿಯುದ್ದಕ್ಕೂ ಹೊರಬರುತ್ತಿದ್ದ ಅನ್ನದಾತರ ಜೈಕಾರಗಳು ಮುಖ್ಯಮಂತ್ರಿಯವರ ಕಾಲ್ನಡಿಗೆಗೆ ವಿಶೇಷ ಮೆರುಗು ನೀಡಿದವು. ಸಾಂಪ್ರದಾಯಿಕವಾಗಿ ಕಲಶಗಳನ್ನು ಹೊತ್ತಿದ್ದ ಹಲವಾರು ರೈತ ಮಹಿಳೆಯರು ದಾರಿಯುದ್ದಕ್ಕೂ ನಾಡಿನ ದೊರೆಗೆ ಪೂರ್ಣಕುಂಭ ಸ್ವಾಗತ ಕೋರಿದರು.

ರಾಜ್ಯದ ಶಕ್ತಿಕೇಂದ್ರ ವಿಧಾನಸೌಧದಲ್ಲಿ ಆಯವ್ಯಯ ಮಂಡಿಸಿದ ನಂತರ ನೇರವಾಗಿ ಸ್ವಾತಂತ್ರ್ಯ ಉದ್ಯಾನವನಕ್ಕೆ ತೆರಳಿ ರೈತ ಪ್ರತಿನಿಧಿಯೊಬ್ಬರಿಗೆ ಮುಂಗಡಪತ್ರದ ಪ್ರತಿ ನೀಡಿದ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡಿರುವ ಬಗ್ಗೆ ರೈತರಿಗೆ ವಿವರಿಸಿದರು.

ಚಾಲುಕ್ಯ ವೃತ್ತದಲ್ಲಿ ರೈತ ಪರಿವಾರಕ್ಕೆ ರಾಷ್ಟ್ರಕವಿ ಕುವೆಂಪು ರಚನೆಯ ನಾಡ ರೈತ ಗೀತೆ 'ಉಳುವ ಯೋಗಿಯ ನೋಡಲ್ಲಿ...' ಕೇಳಿಸಿದ ನಂತರ ತೆರೆದ ವಾಹನದಲ್ಲಿ ಮುಖ್ಯಮಂತ್ರಿ ವಿಧಾನಸೌಧಕ್ಕೆ ತೆರಳಿದರು.

## ರೈತರ ನಂಬಿಕೆಗೆ ಧಕ್ಕೆ ತರಲಾರೆ: ಮಾನ್ಯ ಮುಖ್ಯಮಂತ್ರಿಗಳು

'ನಿಮ್ಮ ನಂಬಿಕೆಗೆ ಹಾಗೂ ನಾನು ನೀಡಿರುವ ಆಶ್ವಾಸನೆಗಳಿಗೆ ಧಕ್ಕೆ ತರುವುದಿಲ್ಲ ಎಂದು ನನ್ನ ರಕ್ತದಲ್ಲಿ ಬರೆದುಕೊಡುವೆ...' ಹೀಗೆ ಹೇಳಿದವರು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಾವಯವ ಕೃಷಿಕರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಾಡಿನ ರೈತರಿಗೆ ನೀಡಿದ ಭರವಸೆ ಮಾತು ಇದು.

ಮುಂದಿನ ದಿನಗಳಲ್ಲಿ ರೈತರಿಗಾಗಿ ಘೋಷಿಸಿರುವ ಯೋಜನೆಗಳನ್ನು ಸಮರ್ಪಕ ಪ್ರಮಾಣದಲ್ಲಿ ತಲುಪಿಸಲು ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಹೊಸ ಯಡಿಯೂರಪ್ಪ ಆಗಿ ಇಂದಿನಿಂದಲೇ ಬದಲಾಗುವೆ ಎಂದು ಅವರು ಆಶ್ವಾಸನೆ ನೀಡಿದರು.

ರೈತರಿಗಾಗಿ ರಾಜ್ಯ ಸರ್ಕಾರ ಪ್ರಕಟಿಸಿರುವ ಯೋಜನೆಗಳನ್ನು ಸಮರ್ಪಕ ಪ್ರಮಾಣದಲ್ಲಿ ತಲುಪುವಂತೆ ಮಾಡಲು ಪ್ರತಿ ಹಳ್ಳಿಯಿಂದ 10-15 ಮಂದಿ ಇರುವಂತಹ ಕಾರ್ಯಕರ್ತರ ತಂಡ ರಚನೆಯಾಗಬೇಕು ಎಂದು ಮುಖ್ಯಮಂತ್ರಿ ಕರೆ ನೀಡಿದರು.

ರೈತರ ಯೋಜನೆಗಳಿಗೆ ಮೀಸಲಾದ ಹಣ ಸೋರಿಕೆಯಾಗುತ್ತಿದೆ. ಇದನ್ನು ತಪ್ಪಿಸಲು ಪ್ರತಿ ಹಳ್ಳಿಗಳಿಂದಲೂ ಕಾರ್ಯಕರ್ತರ ತಂಡ ಶೀಘ್ರವೇ ರಚನೆ ಆಗಬೇಕು ಎಂದು ಮನವಿ ಮಾಡಿದ ಅವರು, ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳು ಸಿಗದೇ ಯುವಕರೆಲ್ಲಾ ನಗರದತ್ತ ಮುಖ ಮಾಡಿ ವಯಸ್ಸಾದವರೇ ತೋಟಗಳಲ್ಲಿ ಉಳಿಯುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ತಪ್ಪಿಸಲು ಎಲ್ಲ ರೀತಿಯಲ್ಲೂ ರೈತರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಹಾಗಾಗಿ ಇಂತಹ ಕಾರ್ಯ ಆಗಬೇಕಾದರೆ ಈ ತಂಡದ ಅವಶ್ಯಕತೆ ಹೆಚ್ಚು ಇದೆ.ಒಟ್ಟಾರೆ ನಾಡಿನ ಎಲ್ಲರೂ ನೆಮ್ಮದಿಯಿಂದ ಬದುಕುವುದಕ್ಕೆ ಎಲ್ಲಾ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡುವುದಾಗಿ ಅವರು ಭರವಸೆ ನೀಡಿದರು.

ಕೃಷಿಗೆ ಪ್ರತ್ಯೇಕ ಮುಂಗಡ ಪತ್ರ ಮಂಡಿಸಿ ಶ್ರೀ ಯಡಿಯೂರಪ್ಪ ಇತಿಹಾಸ ಸೃಷ್ಟಿಸಿದ್ದಾರೆ. ಇದು ದೇಶಕ್ಕೆ ಮಾದರಿ. ಪರಿಶಿಷ್ಟರು, ಅಲ್ಪ ಸಂಖ್ಯಾತರಿಗೆ ಹೆಚ್ಚು ಸವಲತ್ತು ಒದಗಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ಈಶ್ವರಪ್ಪನವರು ನುಡಿದರು.

ಇದೇ ವೇಳೆ ಮಾತನಾಡಿದ ಜಲಸಂಪನ್ಮೂಲ ಸಚಿವ ಶ್ರೀ ಬಸವರಾಜ ಬೊಮ್ಮಾಯಿ, ರೈತರ ಅಭಿವೃದ್ಧಿ ಕ್ರಾಂತಿಗೆ ಇಂದಿನ ಕೃಷಿ ಬಜೆಟ್‌ನಿಂದಲೇ ಬೀಜ ಬಿತ್ತಿದಂತಾಗಿದೆ. ರೈತರನ್ನು ಭದ್ರಗೊಳಿಸುವ ಮೂಲಕ ರಾಜ್ಯದ ಅಭಿವೃದ್ಧಿಯನ್ನು ಭದ್ರಗೊಳಿಸುವ ಭರವಸೆ ನೀಡಲಾಗಿದೆ ಎಂದು ನುಡಿದರು. ಸಮಾರಂಭದಲ್ಲಿ ಕೃಷಿ ಸಚಿವ ಶ್ರೀ ಉಮೇಶ ಕತ್ತಿ ಹಾಗೂ ರಾಜ್ಯ ಸಾವಯವ ಕೃಷಿ ಮಿಷನ್ ಅಧ್ಯಕ್ಷ ಡಾ.ಎ.ಎಸ್.ಆನಂದ್ ಮತ್ತಿತರರು ಹಾಜರಿದ್ದರು.

## ರಾಜ್ಯ ಮುಂಗಡ ಪತ್ರದ ಮುಖ್ಯಾಂಶಗಳು

- ನೀರಾವರಿಗೆ 7,800 ಕೋಟಿ ರೂ.
- "ನೀರಾವರಿ ದಶಕ"ವೆಂದು ಘೋಷಣೆ.
- ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ.
- ಕೃಷಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನ.
- ಹತ್ತು ಸಣ್ಣ ಬಂದರುಗಳ ನಿರ್ಮಾಣ.
- "ಸುವರ್ಣ ಭೂಮಿ' ಯೋಜನೆ ಜಾರಿ.
- ಕೃಷ್ಣ ಐತೀರ್ಪು, 30 ಏತ ನೀರಾವರಿ ಅನುಷ್ಠಾನಕ್ಕೆ ಬದ್ಧ.
- ನದಿ ತಿರುವು ಯೋಜನೆಗೆ ಚಾಲನೆ.
- 10ನೇ ತರಗತಿಯವರೆಗೆ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ.
- ಸೋಲಾಪುರ-ಗದಗ, ಕೊಟ್ಟೂರು-ಹರಿಹರ, ಶಿವಮೊಗ್ಗ-ತಾಳಗುಪ್ಪ ರೈಲು ಯೋಜನೆಗಳಿಗೆ ಆದ್ಯತೆ.
- ನಗರ-ಪಟ್ಟಣಗಳ ಮೂಲಸೌಕರ್ಯ ಅಭಿವೃದ್ಧಿ.
- ಗ್ರಾಮೀಣ ಅಭಿವೃದ್ಧಿಗೆ ಒತ್ತು.
- "ಆಸರೆ' ಯೋಜನೆಯಡಿ 32,400 ಮನೆ ಪೂರ್ಣ.
- "ಹಜ್‌ಮಹಲ್" ನಿರ್ಮಾಣಕ್ಕೆ ಆದ್ಯತೆ.
- ಕ್ರಿಶ್ಚಿಯನ್ ಸಮುದಾಯಕ್ಕೆ 50 ಕೋಟಿ ರೂ.
- "ನನ್ನ ಮನೆ ನನ್ನ ಸ್ವತ್ತು" ಯೋಜನೆ ಜಾರಿ.
- ಸ್ತ್ರೀಶಕ್ತಿ ಸಂಘಗಳಿಗೆ ಪ್ರೋತ್ಸಾಹ ನೀತಿ ಪ್ರಕಟ.
- ಎಪಿಎಂಸಿ ಹಮಾಲಿಗಳಿಗೆ ಹತ್ತು ಸಾವಿರ ಮನೆ.
- ಮೈಸೂರು ಪೇಪರ್ ಮಿಲ್ ಪುನರುಜ್ಜೀವನಕ್ಕೆ 100 ಕೋಟಿ ರೂ.
- ನೂತನ ಮರಳು ನೀತಿ ಜಾರಿಗೆ.
- ಬಸವ ಅಂತರ್‌ರಾಷ್ಟ್ರೀಯ ಕೇಂದ್ರ ಸ್ಥಾಪಿಸಲು 25 ಕೋಟಿ ರೂ.
- ನಾಡಪ್ರಭು ಕೆಂಪೇಗೌಡ ಕಲಾಭವನಕ್ಕೆ ಹತ್ತು ಕೋಟಿ ರೂ.
- ಕೊಂಕಣಿ ಭಾಷೆ ಅಭಿವೃದ್ಧಿಗೆ 5 ಕೋಟಿ ರೂ.
- ಬಸವ ಜಯಂತಿ, ಕನಕ ಜಯಂತಿ, ಅಂಬೇಡ್ಕರ್ ಜಯಂತಿ ಹಾಗೂ ವಾಲ್ಮೀಕಿ ಜಯಂತಿಗೆ ಹಣಕಾಸು ನೆರವು.
- ಲಂಡನ್‌ನಲ್ಲಿ ಬಸವ ಪುತ್ಥಳಿ ನಿರ್ಮಿಸಲು 3 ಕೋಟಿ ರೂ.
- ಚಿತ್ರದುರ್ಗದಲ್ಲಿ ರಕ್ಷಣಾ ಸಂಶೋಧನೆ ಅಭಿವೃದ್ಧಿ ಯೋಜನೆಗಳಿಗಾಗಿ 4,250 ಎಕರೆ ಮಂಜೂರು.
- ಮೇಲುಕೋಟೆ ಅಭಿವೃದ್ಧಿಗೆ 10 ಕೋಟಿ ರೂ.
- ಬಂದೀಖಾನೆ ಆಧುನೀಕರಣ, ಪೊಲೀಸ್ ಠಾಣೆಗಳ ಕಾಮಗಾರಿಗೆ 25 ಕೋಟಿ ರೂ.
- ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ವೇತನ ಸಮಿತಿ ರಚನೆ.
- ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 20 ಕಿ.ಮೀ. ರಸ್ತೆ ಅಭಿವೃದ್ಧಿ.

| ರಾಷ್ಟ್ರೀಯ ಬಿಜೆಪಿ ಪ್ರಕೋಷ್ಠಗಳ ಸಹ-ಸಂಚಾಲಕರು | | | |
|---|---|---|---|
| ಹೆಸರು | ಜಿಲ್ಲೆ | ಪ್ರಕೋಷ್ಠದ ಹೆಸರು | ಜವಾಬ್ದಾರಿ |
| ಶ್ರೀ ಎಂ.ಬಿ. ಝಿರಲಿ | ಬೆಳಗಾವಿ | ಕಾನೂನು ಪ್ರಕೋಷ್ಠ | ಸಹ-ಸಂಚಾಲಕರು |
| ಶ್ರೀ ಲಾಲಾಜಿ ಮೆಂಡನ್ | ಉಡುಪಿ | ಮೀನುಗಾರರ ಪ್ರಕೋಷ್ಠ | ಸಹ-ಸಂಚಾಲಕರು |
| ಶ್ರೀ ಜಿ.ವಿ. ಕೃಷ್ಣ | ಬೆಂಗಳೂರು | ಲೆಕ್ಕ ಪರಿಶೋಧಕರ ಪ್ರಕೋಷ್ಠ | ಸಹ-ಸಂಚಾಲಕರು |
| ಶ್ರೀ ಎಂ.ಎಚ್. ಶ್ರೀಧರ್ | ಬೆಂಗಳೂರು | ಚುನಾವಣಾ ನಿರ್ವಹಣಾ ಪ್ರಕೋಷ್ಠ | ಸಹ-ಸಂಚಾಲಕರು |
| ಶ್ರೀ ಮದನ್ ದೇಸಾಯಿ | ಹುಬ್ಬಳ್ಳಿ | ವ್ಯಾಪಾರಿಗಳ ಪ್ರಕೋಷ್ಠ | ಸಹ-ಸಂಚಾಲಕರು |
| ಡಾ. ಎಸ್.ಕೆ. ಮಿತ್ತಲ್ | ಮೈಸೂರು | ಗೋ ಸಂರಕ್ಷಣೆ ಪ್ರಕೋಷ್ಠ | ಸಹ-ಸಂಚಾಲಕರು |

| ರಾಜ್ಯ ಬಿಜೆಪಿ ಪ್ರಕೋಷ್ಠಗಳ ಸಂಚಾಲಕರು, ಸಹ-ಸಂಚಾಲಕರು (ಮುಂದುವರೆದ ಪಟ್ಟಿ) | | | |
|---|---|---|---|
| ಹೆಸರು | ಜಿಲ್ಲೆ | ಪ್ರಕೋಷ್ಠದ ಹೆಸರು | ಜವಾಬ್ದಾರಿ |
| ಶ್ರೀ ಡಿ.ಕೆ. ಸಿದ್ಧರಾಮ | ಬೀದರ್ | ಕಬ್ಬು ಬೆಳೆಗಾರರ ವೇದಿಕೆ | ಸಂಚಾಲಕರು |
| ಶ್ರೀ ವಿವೇಕ್ ರೆಡ್ಡಿ | ಬೆಂಗಳೂರು | ವಕೀಲರ ಪ್ರಕೋಷ್ಠ | ಸಂಚಾಲಕರು |
| ಶ್ರೀ ವಿನೋದ್ ಕುಮಾರ್ | ಬೆಂಗಳೂರು | ವಕೀಲರ ಪ್ರಕೋಷ್ಠ | ಸಹ-ಸಂಚಾಲಕರು |
| ಶ್ರೀ ಜೆ.ಟಿ. ರಾಜಶೇಖರ | ಬೆಂಗಳೂರು | ಜೈವಿಕ ಇಂಧನ ಪ್ರಕೋಷ್ಠ | ಸಂಚಾಲಕರು |
| ಶ್ರೀ ರಮೇಶ್ ಶಿವರಾಮ್ | ಬೆಂಗಳೂರು | ಜಲ ನಿರ್ವಹಣೆ ಪ್ರಕೋಷ್ಠ | ಸಂಚಾಲಕರು |
| ಡಾ|| ಡಿ.ಪಿ. ರಮೇಶ್ | ಬೆಂಗಳೂರು | ಗೋ ಸಂರಕ್ಷಣಾ ಪ್ರಕೋಷ್ಠ | ಸಂಚಾಲಕರು |
| ಶ್ರೀ ಪ್ರಕಾಶ್ ಅಕ್ಕಲಕೋಟೆ | ಬಿಜಾಪುರ | ಗೋ ಸಂರಕ್ಷಣಾ ಪ್ರಕೋಷ್ಠ | ಸಹ-ಸಂಚಾಲಕರು |
| ಶ್ರೀಮತಿ ನೂರ್ ಫಾತಿಮಾ | ಮೈಸೂರು | ಸ್ವ-ಸಹಾಯ ಸಂಘಗಳ ಪ್ರಕೋಷ್ಠ | ಸಂಚಾಲಕರು |
| ಶ್ರೀ ರಾಜೇಂದ್ರ ಕುಮಾರ್ | ಬೆಂಗಳೂರು | ಸಣ್ಣ ಕೈಗಾರಿಕೆಗಳ ಪ್ರಕೋಷ್ಠ | ಸಂಚಾಲಕರು |
| ಶ್ರೀ ಕೆ.ಎನ್. ಗುರುನಾಥ್ | ಬೆಂಗಳೂರು | ಲೆಕ್ಕ ಪರಿಶೋಧಕರ ಪ್ರಕೋಷ್ಠ | ಸಂಚಾಲಕರು |
| ಶ್ರೀ ಮುರಳೀಧರ ಮೂರ್ತಿ | ಬೆಂಗಳೂರು | ಬಂಡವಾಳ ಹೂಡಿಕೆದಾರರ ಪ್ರಕೋಷ್ಠ | ಸಂಚಾಲಕರು |
| ಶ್ರೀ ಶ್ರೀನಿವಾಸ ತಿವಾರಿ | ಬೆಂಗಳೂರು | ಆರ್ಥಿಕ ಪ್ರಕೋಷ್ಠ | ಸಂಚಾಲಕರು |
| ಶ್ರೀ ನರೇಂದ್ರ ನಾಯಕ್ | ಬೆಂಗಳೂರು | ಆರ್ಥಿಕ ಪ್ರಕೋಷ್ಠ | ಸಹ-ಸಂಚಾಲಕರು |

## ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು (ಮುಂದುವರೆದ ಪಟ್ಟಿ)

| ಜಿಲ್ಲೆ | ಅಧ್ಯಕ್ಷರು | ಉಪಾಧ್ಯಕ್ಷರು |
|---|---|---|
| ದಕ್ಷಿಣಕನ್ನಡ | ಶ್ರೀಮತಿ ಶೈಲಜಾ ಕೆ.ಟಿ.ಭಟ್ | ಶ್ರೀಮತಿ ಧನಲಕ್ಷ್ಮೀ |
| ಉಡುಪಿ | ಶ್ರೀ ಕಟಪಾಡಿ ಶಂಕರ ಪೂಜಾರಿ | ಶ್ರೀಮತಿ ಜ್ಯೋತಿ ಸೀತಾರಾಮ ಶೆಟ್ಟಿ |
| ಚಿಕ್ಕಮಗಳೂರು | ಶ್ರೀ ಪ್ರಫುಲ್ಲಾ ಮಂಜುನಾಥ | ಶ್ರೀ ಎಂ. ಎಸ್. ರಂಗನಾಥ |
| ಶಿವಮೊಗ್ಗ | ಶ್ರೀಮತಿ ಸುಧಾ ಕೃಷ್ಣಮೂರ್ತಿ | ಶ್ರೀ ಹುಣಸವಳ್ಳಿ ಗಂಗಾಧರ |
| ದಾವಣಗೆರೆ | ಶ್ರೀ ಬಸವರಾಜ | ಶ್ರೀ ಮುಕುಂದ್ |
| ಬೆಂಗಳೂರು ಗ್ರಾ. | ಶ್ರೀಮತಿ ಭಾಗ್ಯಮ್ಮ ಮುನಿಕೃಷ್ಣಪ್ಪ | ಶ್ರೀಮತಿ ಶಾಂತಮ್ಮ ನಾರಾಯಣಸ್ವಾಮಿ |
| ಕೋಲಾರ | ಶ್ರೀಮತಿ ಮಂಜುಳಾ ವೆಂಕಟೇಶ್ | |
| ಮೈಸೂರು | | ಡಾ. ಶಿವರಾಮ |

ನೂತನವಾಗಿ ಆಯ್ಕೆಯಾದ ಎಲ್ಲರಿಗೂ ಅಭಿನಂದನೆಗಳು.

– ಸಂಪಾದಕರು

ಧ್ಯೇಯ ಕಮಲ ಮಾಸ ಪತ್ರಿಕೆ

ಧ್ಯೇಯಕಮಲ ಪತ್ರಿಕೆಗೆ ತಮ್ಮ ವಾರ್ಷಿಕ ಚಂದಾ ಅವಧಿ ಮುಕ್ತಾಯಗೊಳ್ಳುವ ತಿಂಗಳನ್ನು ಈ ಸಂಚಿಕೆಗೆ ಅಂಟಿಸಿರುವ ತಮ್ಮ ವಿಳಾಸದ ಚೀಟಿಯ ಮೂಲೆ ಭಾಗದಲ್ಲಿ ನಮೂದಿಸಲಾಗಿದೆ. ದಯವಿಟ್ಟು ಅವಧಿಗೆ ಮುನ್ನ ರೂ. 100/- ವಾರ್ಷಿಕ ಚಂದಾ ಹಣವನ್ನು ಎಂ.ಓ.ಮೂಲಕ 'ಧ್ಯೇಯಕಮಲ' ಕಾರ್ಯಾಲಯಕ್ಕೆ ಕಳುಹಿಸಿ ತಮ್ಮ ಚಂದಾ ಸದಸ್ಯತ್ವವನ್ನು ನವೀಕರಿಸುವುದು. ವಿವರಗಳಿಗೆ ಧ್ಯೇಯ ಕಮಲ ಪ್ರಕಾಶನ ವಿಭಾಗವನ್ನು ಸಂಪರ್ಕಿಸಿ. – ಸಂಪಾದಕರು